# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು–572 103

ಸಂಖ್ಯೆ :ತುವಿ:ವಿ.ವಿ.ಪ/ಸಿಂ.ವಿ/2023–24/3358 ದಿನಾಂಕ: 13.12.2023

ಇವರಿಗೆ,

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯರೆ,

**ವಿಷಯ: 2023–24ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ಕಾರ್ಯಸೂಚಿಗಳನ್ನು ಕಳುಹಿಸುತ್ತಿರುವ ಕುರಿತು**

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯನ್ನು **ದಿನಾಂಕ:22.12.2023ರ ಶುಕ್ರವಾರ ಬೆಳಿಗ್ಗೆ: 10:00 ಗಂಟೆಗೆ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ, ತುಮಕೂರು** ಇಲ್ಲಿ ಏರ್ಪಡಿಸಲಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಲಿರುವ ಕಾರ್ಯಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ, ಕಳುಹಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಅಡಕ:** ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ಕಾರ್ಯಸೂಚಿಗಳು

**ಪ್ರತಿಗಳು:**

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕಚೇರಿ ಪ್ರತಿ.

# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103

ಸಭಾ ಸಂಖ್ಯೆ: ಸಾ.ವಿ.ಪ-01 ದಿನಾಂಕ: 22.12.2023 ಸಮಯ: ಬೆಳಿಗ್ಗೆ: 10.00

**2023-24ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ಕಾರ್ಯಸೂಚಿಗಳು**

| ಕ್ರ.ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ಪುಟ ಸಂಖ್ಯೆ |
|---|---|---|---|
| | | ದಿನಾಂಕ 13.09.2023ರಂದು ನಡೆದ ಪ್ರಥಮ ವಿಶೇಷ ವಿದ್ಯಾವಿಷಯಕ ಪರಿಷತ್ತು ಸಭಾ ನಡಾವಳಿಗಳ ದೃಢೀಕರಣ | |
| | | ಹಣಕಾಸು ವಿಭಾಗ | |
| 1. | 2023-24.ಸಾ.ವಿ.ಪ-01 ಹ.ವಿ-01 | 2023-24ನೇ ಸಾಲಿನ ವ್ಯವಹಾರಿಕ ಆಯ-ವ್ಯಯದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹೆಚ್ಚುವರಿ ಮೊತ್ತವನ್ನು ಮರು ಹಂಚಿಕೆ ಮಾಡಿಕೊಂಡಿರುವ ಬಗ್ಗೆ-ಸ್ಥಿರೀಕರಣ ಕೋರಿ. | 1 |
| 2. | 2023-24.ಸಾ.ವಿ.ಪ-01 ಹ.ವಿ-02 | ಸನ್ನದು ಲೆಕ್ಕ ಪರಿಶೋಧಕರಿಂದ ಸಿದ್ದಪಡಿಸಲಾದ 2022-23ನೇ ಸಾಲಿನ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕ ಪತ್ರಗಳನ್ನು ಅನುಮೋದಿಸುವ ಕುರಿತು. | 2 |
| | | ಶೈಕ್ಷಣಿಕ ವಿಭಾಗ | |
| 3. | 2023-24.ಸಾ.ವಿ.ಪ-01 ಶೈ.ವಿ-01 | ಸ್ನಾತಕೋತ್ತರ ಸಂಸ್ಕೃತ ಮತ್ತು ಸ್ನಾತಕೋತ್ತರ ಸಾವಯುವ ರಸಾಯನಶಾಸ್ತ್ರ ಹಾಗೂ ಪಿ.ಜಿ ಡಿಪ್ಲೋಮಾ ವಿಷಯಗಳ ಪಠ್ಯಕ್ರಮಗಳನ್ನು ಸಲ್ಲಿಸಿರುವ ಕುರಿತು. | 3 |
| 4. | 2023-24.ಸಾ.ವಿ.ಪ-01 ಶೈ.ವಿ-02 | ತುಮಕೂರು ವಿಶ್ವವಿದ್ಯಾನಿಲಯದ ಎಂ.ಸಿ.ಎ ವಿಭಾಗದ ವಿದ್ಯಾರ್ಥಿಗಳ ಪ್ರವೇಶಮಿತಿಯನ್ನು ಹೆಚ್ಚಿಸುವ ಕುರಿತು. | 4 |
| 5. | 2023-24.ಸಾ.ವಿ.ಪ-01 ಶೈ.ವಿ-03 | 2023-24ನೇ ಸಾಲಿನ ವಿವಿಧ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಪಠ್ಯಕ್ರಮಗಳ ಅನುಮೋದನೆ ಕುರಿತು. | 5 |
| | | ಕಾಲೇಜು ಅಭಿವೃದ್ಧಿ ಪರಿಷತ್ತು | |
| 6. | 2023-24.ಸಾ.ವಿ.ಪ-01 ಕಾ.ಅ.ವಿ-01 | 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕಗಳನ್ನು ಶೇ.14% ರಷ್ಟು ಹೆಚ್ಚಿಸುವ ಕುರಿತು. | 6 |
| | | ಅಭಿವೃದ್ಧಿ ವಿಭಾಗ | |
| 7. | 2023-24.ಸಾ.ವಿ.ಪ-01 ಅ.ವಿ-01 | IFIA BHARATH ಸಂಸ್ಥೆಯ Tumkur University Chapter ನ್ನು ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗದಲ್ಲಿ ಸ್ಥಾಪಿಸುವ ಕುರಿತು. | 7 |
| 8. | 2023-24.ಸಾ.ವಿ.ಪ-01 ಅ.ವಿ-02 | Tumkur University (Prevention, Prohibition and Redressal of Sexual Harassment of the Women Employees and the Students) ರೆಗ್ಯುಲೇಷನ್ಸ್ ಅನುಮೋದಿಸುವ ಕುರಿತು. | 8 |
| 9. | 2023-24.ಸಾ.ವಿ.ಪ-01 ಅ.ವಿ-03 | Tumkur University Regulations for Redressal of Grievances of Students-2023 ಅನುಮೋದಿಸುವ ಕುರಿತು. | 9 |
| 10. | 2023-24.ಸಾ.ವಿ.ಪ-01 ಅ.ವಿ-04 | Tumkur University Regulation on Curbing the Menace of Ragging-2023 ಅನುಮೋದಿಸುವ ಕುರಿತು. | 10 |
| 11. | 2023-24.ಸಾ.ವಿ.ಪ-01 ಅ.ವಿ-05 | ದಿನಾಂಕ:05.12.2023 ರಂದು ನಡೆದ ವಿಶ್ವವಿದ್ಯಾನಿಲಯದ ಇನ್‌ಕ್ಯುಬೇಷನ್ ಸೆಂಟರ್ ಸಲಹಾ ಸಮಿತಿ ಶಿಫಾರಸ್ಸು ಕುರಿತು. | 11 |
| | | ಸಿಬ್ಬಂದಿ ವಿಭಾಗ | |
| 12. | 2023-24.ಸಾ.ವಿ.ಪ-01 ಸಿ.ವಿ-01 | ವಿಶ್ವವಿದ್ಯಾನಿಲಯಕ್ಕೆ ವಿಲೀನಗೊಂಡಿರುವ (ಘಟಕ ಕಾಲೇಜುಗಳ) ಸಿಬ್ಬಂದಿಗಳ ಹಳೇ ಪಿಂಚಣಿ ಯೋಜನೆ ಮತ್ತು ಇತರೆ ನಿವೃತ್ತಿ ಸೇವಾ ಸೌಲಭ್ಯಗಳನ್ನು ನೀಡುವ ಕುರಿತು. | 12 |
| 13. | 2023-24.ಸಾ.ವಿ.ಪ-01 ಸಿ.ವಿ-02 | ವಿಶ್ವವಿದ್ಯಾನಿಲಯಕ್ಕೆ ಬೋಧಕೇತರ ಸಿಬ್ಬಂದಿಗಳ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾದ ವಿಷಯದ ಸ್ಥಿರೀಕರಣದ ಕುರಿತು. | 13 |
| 14. | 2023-24.ಸಾ.ವಿ.ಪ-01 ಸಿ.ವಿ-03 | ವಿಶ್ವವಿದ್ಯಾನಿಲಯ ಮತ್ತು ಘಟಕ ಕಾಲೇಜುಗಳ ಅಧ್ಯಾಪಕರಿಗೆ ಸಿ.ಎ.ಎಸ್. ಪದೋನ್ನತಿ/ ಪಿಹೆಚ್.ಡಿ. ಮತ್ತು ಎಂ.ಫಿಲ್. ಪಡೆದ ದಿನಾಂಕಗಳಿಂದ ಅನ್ವಯವಾಗುವಂತೆ (ಅರ್ಹತಾ ದಿನಾಂಕ) ಆರ್ಥಿಕ ಸೌಲಭ್ಯಗಳನ್ನು ಹಾಗೂ ಸಿ.ಎ.ಎಸ್. ಪದೋನ್ನತಿಯಲ್ಲಿ ಕನಿಷ್ಠ ಸೇವಾವಧಿ ರಿಯಾಯಿತಿ / ಪಿಹೆಚ್.ಡಿ ಮತ್ತು ಎಂ.ಫಿಲ್ ಪದವಿಗಳಿಗೆ ಸಂಬಂಧಿಸಿದ ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ ಎರಡನ್ನೂ ಮಂಜೂರು ಮಾಡುವ ಕುರಿತು | 14 |

| ವಿಷಯ ಸಂಖ್ಯೆ | ಹ.ವಿ:01:1ನೇ.ಸಾ.ವಿ.ಪ/01 ದಿನಾಂಕ:22.12.2023 |
|---|---|

**ವಿಷಯ:**-2023-24ನೇ ಸಾಲಿನ ವ್ಯವಹಾರಿಕ ಆಯ-ವ್ಯಯದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹೆಚ್ಚುವರಿ ಮೊತ್ತವನ್ನು ಮರುಹಂಚಿಕೆ ಮಾಡಿಕೊಂಡಿರುವ ಬಗ್ಗೆ-ಸ್ಥಿರೀಕರಣ ಕೋರಿ

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, 2023-24ನೇ ಸಾಲಿನ ವ್ಯವಹಾರಿಕ ಆಯ-ವ್ಯಯದ ಲೆಕ್ಕ ಶೀರ್ಷಿಕೆಗಳಲ್ಲಿ ನಿಗಧಿ ಪಡಿಸಲಾದ ಅನುದಾನ ಮುಕ್ತಾಯವಾದ ಕಾರಣ ಮತ್ತು ಸಂಬಂಧಪಟ್ಟ ವಿಭಾಗಗಳ ಕೋರಿಕೆಯ ಮೇರೆಗೆ, ಅನುದಾನ ಲಭ್ಯವಿರುವ Examination Expenditure ನ ಲೆಕ್ಕ ಶೀರ್ಷಿಕೆ 55. Examination Result processing scanners, printers etc. ಮತ್ತು 63. Digitalisation of Valuation ನಿಂದ ತಲಾ 50 ಲಕ್ಷಗಳಂತೆ ಒಟ್ಟು ರೂ.100.00 (ರೂ. ನೂರು ಲಕ್ಷಗಳು) ಅನುದಾನ ಹಾಗೂ Captial Expenditure ನ ಲೆಕ್ಕ ಶೀರ್ಷಿಕೆ 1. Building Construction, Civil Works ನಿಂದ ರೂ.845.39 (ರೂ. ಎಂಟು ನೂರ ನಲವತ್ತೈದು ಲಕ್ಷದ ಮೂವತ್ತೊಂಭತ್ತು ಸಾವಿರ) ಗಳನ್ನು ಈ ಕೆಳಕಂಡ ವಿವರಗಳಂತೆ ಮಾನ್ಯಕುಲಪತಿಗಳ ಅನುಮೋದನೆ ಮೇರೆಗೆ ಒಟ್ಟು ರೂ. 945.39 (ರೂ. ಒಂಭೈನೂರ ನಲವತ್ತೈದು ಲಕ್ಷದ ಮೂವತ್ತೊಂಭತ್ತು ಸಾವಿರ) ಅನುದಾನವನ್ನು ಮರುಹಂಚಿಕೆ ಮಾಡಿಕೊಳ್ಳಲಾಗಿರುತ್ತದೆ.

| ಕ್ರಮ ಸಂಖ್ಯೆ | ನಿಗಧಿಪಡಿಸಲಾದ ಲೆಕ್ಕ ಶೀರ್ಷಿಕೆ | ನಿಗಧಿಪಡಿಸಲಾಗಿದ್ದ ಮೊತ್ತ (ಲಕ್ಷಗಳಲ್ಲಿ) | ಹೆಚ್ಚುವರಿಯಾಗಿ ಮರುಹಂಚಿಕೆ ಮಾಡಿಕೊಳ್ಳಲಾದ ಮೊತ್ತ (ಲಕ್ಷಗಳಲ್ಲಿ) |
|---|---|---|---|
| 01 | **04**-Adverstisement | 8.80 | 5.00 |
| 02 | **13**-BOS/BOAE/LIC/RRC/Other meetings | 10.00 | 15.00 |
| 03 | **26**-Salaries of Guest Lecturers/Visiting Fellows (PG Departments, Arts College, Science college & PG Centres | 550.00 | 206.00 |
| 04 | **35**-Data Entry Operators, Project Assistants & ICT Employees | 110.00 | 42.00 |
| 05 | **34**- Campus Cleaning and Maintenance, Gardening, Outsourcing & Others | 220.00 | 200.00 |
| 06 | **36**-Maintenance of Generator and Fuel | 10.00 | 10.00 |
| 07 | **42**-Planning, Monitoring & Evaluation Board | 1.00 | 1.00 |
| 08 | **54**-Printing of Materials, Equipment | 120.00 | 100.00 |
| 09 | **56**- TA-DA& Remuneration PG/Ph.D Examination | 70.00 | 30.00 |
| 10 | **57**- TA-DA& Remuneration UG Examination | 350.00 | 220.00 |

| | | | |
|---|---|---|---|
| 11 | **58**- Custodian, BOE, Squad, Departmental Exam, etc. | 55.00 | 80.00 |
| 12 | **59**- Convocation Expenditure | 35.00 | 30.00 |
| 13 | **64**-Dept.Of Biochemistry | 6.00 | 2.5 |
| 14 | **69**-Dept.of Organic Chemistry | 6.00 | 3.89 |
| | ಒಟ್ಟು ಮೊತ್ತ ರೂ (ಲಕ್ಷಗಳಲ್ಲಿ) | **1551.8** | **945.39** |

ಸದರಿ ವಿಷಯವನ್ನು ಪ್ರಥಮ ಹಣಕಾಸು ಸಮಿತಿ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

**ನಿರ್ಣಯ: ಸಭೆಯಲ್ಲಿ ಸದರಿ ವಿಷಯವನ್ನು ಚರ್ಚಿಸಲಾಗಿ ಎಲ್ಲಾ ಸದಸ್ಯರು ಸರ್ವಾನು ಮತದಿಂದ ಅನುಮೋದಿಸಿ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲಾಗಿದೆ.**

**ಸದರಿ ವಿಷಯವನ್ನು ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಸ್ಥಿರೀಕರಣಕ್ಕಾಗಿ ಮಂಡಿಸಲು ಶಿಫಾರಸ್ಸು ಮಾಡಲಾಗಿದೆ.**

| ವಿಷಯ ಸಂಖ್ಯೆ: | ಹ.ವಿ:02:1ನೇ.ಸಾ.ವಿ.ಪ/01 ದಿನಾಂಕ:22.12.2023 |
|---|---|

**ವಿಷಯ: ಸನ್ನದು ಲೆಕ್ಕಪರಿಶೋಧಕರಿಂದ ಸಿದ್ದಪಡಿಸಲಾದ 2022-23ನೇ ಸಾಲಿನ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕಪತ್ರಗಳನ್ನು ಅನುಮೋದಿಸುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ **ಮೆ. ಬದರಿ ಮಧುಸೂದನ್ & ಶ್ರೀನಿವಾಸನ್, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು,** ಇವರಿಂದ ಸಿದ್ದಪಡಿಲಾದ 2022-23ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದಿನಾಂಕ:23.11.2023 ರಂದು ನಡೆಯುವ ಪ್ರಥಮ ಹಣಕಾಸು ಸಮಿತಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ: ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಈ ಕುರಿತು ದಿನಾಂಕ:23.11.2023ರ ಹಣಕಾಸು ಸಮಿತಿಯ ಶಿಫಾರಸ್ಸಿನನ್ವಯ ಸನ್ನದು ಲೆಕ್ಕಪರಿಶೋಧಕರಿಂದ ಸಿದ್ದಪಡಿಸಲಾದ 2022-23ನೇ ಸಾಲಿನ ಖರ್ಚು ವೆಚ್ಚಗಳಿಗೆ ಸಂಬಂಧಿಸದಂತೆ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿ ವಿದ್ಯಾವಿಷಯಕ್ ಪರಿಷತ್ ಮತ್ತು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು.**

**ಸದರಿ ವಿಷಯವನ್ನು ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.**

| ವಿಷಯ ಸಂಖ್ಯೆ | 2023–24 : ಸಾ.ವಿ.ಪ: 01 ಶೈ.ವಿ.:01 ದಿನಾಂಕ:22.12.2023 |
|---|---|

**ವಿಷಯ: ಸ್ನಾತಕೋತ್ತರ ಸಂಸ್ಕೃತ ಮತ್ತು ಸ್ನಾತಕೋತ್ತರ ಸಾವಯವ ರಸಾಯನಶಾಸ್ತ್ರ ಹಾಗೂ ಪಿ.ಜಿ. ಡಿಪ್ಲೋಮಾ ವಿಷಯಗಳ ಪಠ್ಯಕ್ರಮಗಳನ್ನು ಸಲ್ಲಿಸಿರುವ ಕುರಿತು.**

* * * * *

2023–24ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಸ್ನಾತಕೋತ್ತರ ಪಠ್ಯಕ್ರಮಗಳ ಪರಿಷ್ಕರಿಸುವ ಮತ್ತು ನೂತನವಾಗಿ ರಚಿಸುವ ಕುರಿತು ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಮುಖ್ಯಸ್ಥರುಗಳು ಅಧ್ಯಯನ ಮಂಡಳಿಗಳ ಸದಸ್ಯರೊಂದಿಗೆ ಸಭೆ ನಡೆಸಿ ಸಭಾ ನಡಾವಳಿಯೊಂದಿಗೆ ಪಠ್ಯಕ್ರಮಗಳನ್ನು ಸಿದ್ದಪಡಿಸಿ ಸಲ್ಲಿಸಿರುತ್ತಾರೆ.

1. ಸ್ನಾತಕೋತ್ತರ ಸಂಸ್ಕೃತ
2. ಸ್ನಾತಕೋತ್ತರ ಸಾವಯವ ರಸಾಯನಶಾಸ್ತ್ರ
3. ಪಿ.ಜಿ. ಡಿಪ್ಲೋಮಾ in Academic Writing and Publishing
4. ಪಿ.ಜಿ. ಡಿಪ್ಲೋಮಾ in Human Rights

ಆದ್ದರಿಂದ, ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಿಯಾಗಿರುವ ಸ್ನಾತಕೋತ್ತರ ಸಂಸ್ಕೃತ, ಸ್ನಾತಕೋತ್ತರ ಸಾವಯವ ರಸಾಯನಶಾಸ್ತ್ರ, ಪಿ.ಜಿ. ಡಿಪ್ಲೋಮಾ in Academic Writing and Publishing ಮತ್ತು ಪಿ.ಜಿ. ಡಿಪ್ಲೋಮಾ in Human Rights ವಿಷಯಗಳ ಪಠ್ಯಕ್ರಮಗಳನ್ನು 2023–24ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸಿಕೊಳ್ಳುವ ಸಂಬಂಧ ಅಧಿಸೂಚನೆ ಹೊರಡಿಸುವ ಕುರಿತು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2023-24 : ಸಾ.ವಿ.ಪ: 01 ಶೈವಿ :02 ದಿನಾಂಕ: 22.12.2023 |
| --- | --- |

**ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಎಂ.ಸಿ.ಎ. ವಿಭಾಗದ ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು ಹೆಚ್ಚಿಸುವ ಕುರಿತು.**

**ಉಲ್ಲೇಖ: ಶ್ರೀ ನಂದಕುಮಾರ್ ಬಿ., ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರ ಪತ್ರ ದಿನಾಂಕ:03.10.2023**

* * * * *

ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ತುಮಕೂರು ವಿಶ್ವವಿದ್ಯಾನಿಲಯದಲ್ಲಿನ ಎಂ.ಸಿ.ಎ. ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು ಪ್ರಕರಣ 59(18)ರ ಪರಂತುಕದನ್ವಯ ಸರ್ಕಾರದಿಂದ ಹೆಚ್ಚಿಸಲು ಅವಕಾಶವಿರುವುದಿಲ್ಲ. ತಾನು ಯುಕ್ತವೆಂದು ಭಾವಿಸುವಂತಹ ವ್ಯಾಸಂಗ ಶಾಖೆಗಳಲ್ಲಿ ಮತ್ತು ಅಧ್ಯಯನ ಕ್ರಮಗಳಲ್ಲಿ ಬೋಧನೆ ಮತ್ತು ತರಭೇತಿಯನ್ನು ಒದಗಿಸಲು ಮತ್ತು ಸಂಶೋಧನೆ ಹಾಗೂ ಜ್ಞಾನ ಪ್ರಸಾರಕ್ಕಾಗಿ ವ್ಯವಸ್ಥೆ ಮಾಡಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ರ ಪ್ರಕರಣ 4(i)ರಡಿ ತುಮಕೂರು ವಿಶ್ವವಿದ್ಯಾನಿಲಯಕ್ಕೆ ಅಧಿಕಾರ ಪ್ರದತ್ತವಾಗಿರುತ್ತದೆ. ಆದುದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರಡಿ ನಿಹಿತವಾಗುವ ಅಧಿಕಾರಗಳನ್ವಯ ನಿಯಮಾನುಸಾರ ಪರಿಶೀಲಿಸಿ, AICTE ಮಾನದಂಡ ಪೂರೈಸಿಕೊಂಡು ಪ್ರಸ್ತುತ ಇರುವ ಮಾನವ ಹಾಗೂ ಆರ್ಥಿಕ ಸಂಪನ್ಮೂಲಗಳಡಿಯಲ್ಲಿಯೇ ಹೊಂದಾಣಿಕೆ ಮಾಡಿಕೊಂಡು ಎಂ.ಸಿ.ಎ. ಕೋರ್ಸಿನ ವಿದ್ಯಾರ್ಥಿ ಪ್ರಮಾಣದ ಹೆಚ್ಚಳದ ಬಗ್ಗೆ ಸೂಕ್ತ ನಿರ್ಣಯ ತಳೆಯುವಂತೆ ವಿಶ್ವವಿದ್ಯಾನಿಲಯಕ್ಕೆ ನಿರ್ದೇಶಿಸಲಾಗಿರುತ್ತದೆ.

ಈ ಕುರಿತು ಸಂಯೋಜಕರು, ಸ್ನಾತಕೋತ್ತರ ಎಂ.ಸಿ.ಎ. ವಿಭಾಗ, ಇವರು ದಿನಾಂಕ:06.10.2023 ರಂದು ಮನವಿ ಸಲ್ಲಿಸಿ, ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಎಂ.ಸಿ.ಎ. (Main Campus) ವಿಭಾಗದಲ್ಲಿ ಪ್ರವೇಶ ಮಿತಿಯು 30 ಸೀಟುಗಳಿದ್ದು, ದಿನಾಂಕ:13.03.2023 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ 20 ಸೀಟುಗಳನ್ನು ಹೆಚ್ಚಿಸಲು ಅನುಮತಿ ದೊರೆತಿದ್ದು, ಈಗ ಮತ್ತೆ ಇನ್ನೂ 10 ಸೀಟುಗಳನ್ನು ಹೆಚ್ಚಿಸಿ ಈ ಶೈಕ್ಷಣಿಕ ವರ್ಷದಿಂದ ಒಟ್ಟು 60 ಸೀಟುಗಳಿಗೆ ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಈ ಸಂಬಂಧ ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಎಂ.ಸಿ.ಎ. ಕೋರ್ಸಿನ 30 ಪ್ರವೇಶ ಮಿತಿಯನ್ನು ಹೆಚ್ಚಿಸಲು AICTE ಮಾನದಂಡ ಪೂರೈಸಿಕೊಂಡು ಪ್ರಸ್ತುತ ಇರುವ ಮಾನವ ಹಾಗೂ ಆರ್ಥಿಕ ಸಂಪನ್ಮೂಲಗಳಡಿಯಲ್ಲಿಯೇ ಹೊಂದಾಣಿಕೆ ಮಾಡಿಕೊಂಡು ಎಂ.ಸಿ.ಎ. ಕೋರ್ಸಿನ ವಿದ್ಯಾರ್ಥಿ ಪ್ರಮಾಣದ ಹೆಚ್ಚಳದ ಬಗ್ಗೆ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುವಂತೆ ವಿಶ್ವವಿದ್ಯಾನಿಲಯಕ್ಕೆ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಸ್ನಾತಕೋತ್ತರ ಎಂ.ಸಿ.ಎ. (Main Campus) ವಿಭಾಗದಲ್ಲಿ ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು 2023-24ನೇ ಸಾಲಿನಿಂದ 60 ಸೀಟುಗಳಿಗೆ ಹೆಚ್ಚಿಸಿ ಅನುಮತಿ ನೀಡಿರುವ ಕ್ರಮವನ್ನು ಸ್ಥಿರೀಕರಣಕ್ಕಾಗಿ ದಿನಾಂಕ:30.10.2023 ರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿತ್ತು.

**ನಿರ್ಣಯ: ಸರ್ಕಾರದ ಪತ್ರ ಸಂಖ್ಯೆ: ಇಡಿ 46 ಯುಟಿಟಿ 2023 ದಿನಾಂಕ 03.10.2023ರ ನಿರ್ದೇಶನದನ್ವಯ, ತುಮಕೂರು ವಿಶ್ವವಿದ್ಯಾನಿಲಯವು ಎಂ.ಸಿ.ಎ. ಕೋರ್ಸಿನ ಹಾಲಿ ಇರುವ ಪ್ರವೇಶ ಮಿತಿಯನ್ನು 30 ರಿಂದ 60ಕ್ಕೆ ಹೆಚ್ಚಿಸಿ ದಿನಾಂಕ:18.10.2023ರಂದು ಅಧಿಸೂಚಿಸಿರುವ (ಅಧಿಸೂಚನೆ ಸಂಖ್ಯೆ: ತುವಿ:ಶೈವಿ:PG:2023-24/2847ದಿನಾಂಕ 18.10.2023) ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.**

ಸ್ನಾತಕೋತ್ತರ ಎಂ.ಸಿ.ಎ. (Main Campus) ವಿಭಾಗದಲ್ಲಿ ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು 2023-24ನೇ ಸಾಲಿನಿಂದ 60 ಸೀಟುಗಳಿಗೆ ಹೆಚ್ಚಿಸಿ ಅನುಮತಿ ನೀಡಿರುವ ಕ್ರಮವನ್ನು ಸ್ಥಿರೀಕರಣಕ್ಕಾಗಿ ವಿದ್ಯಾ ವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿದೆ.

| ವಿಷಯ ಸಂಖ್ಯೆ | 2023-24: ಸಾವಿವಿಪ:01 :ಶೈವಿ:03 :ದಿನಾಂಕ:22.12.2023 |
|---|---|

**ವಿಷಯ : 2023-24ನೇ ಸಾಲಿನ ವಿವಿಧ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಪಠ್ಯಕ್ರಮಗಳ ಅನುಮೋದನೆ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಅಡಿಯಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿ ವಿಶ್ವವಿದ್ಯಾನಿಲಯದಿಂದ ಅಧಿಸೂಚಿಸಲಾಗಿತ್ತು. ಸದರಿ ಸಮಿತಿಗಳ ಅಧ್ಯಯನ ಮಂಡಳಿಯವರು ಸಭೆಯನ್ನು ನಡೆಸಿ, ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವ ಅಧ್ಯಯನ ಮಂಡಳಿಗಳ ಪಠ್ಯಕ್ರಮವನ್ನು ರಚಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದು, ಸದರಿ ಪಠ್ಯಕ್ರಮಗಳನ್ನು ಶೈಕ್ಷಣಿಕ ಹಿತದೃಷ್ಟಿಯಿಂದ ಈಗಾಗಲೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲಾಗಿದ್ದು, ಸದರಿ ವಿಷಯವನ್ನು ಅನುಮೋದನೆಗಾಗಿ ವಿದ್ಯಾವಿಷಯಕ ಪರಿಷತ್ ಸಭೆಗೆ ಕಾರ್ಯಸೂಚಿಯನ್ನು ಮಂಡಿಸಲಾಗಿದೆ.

| ಕ್ರ.ಸಂ | ವಿಷಯ | ಪಠ್ಯಕ್ರಮದ ವಿವರ |
|---|---|---|
| 1 | ಸ್ನಾತಕ ಪ್ರಾಣಿಶಾಸ್ತ್ರ ಅಧ್ಯಯನ ಮಂಡಳಿ | 5 ಮತ್ತು 6ನೇ ಸೆಮಿಸ್ಟರ್ |
| 2 | ಸ್ನಾತಕ ಮನಃಶಾಸ್ತ್ರ ಅಧ್ಯಯನ ಮಂಡಳಿ | 5 ಮತ್ತು 6ನೇ ಸೆಮಿಸ್ಟರ್ |
| 3 | ಸ್ನಾತಕ ಗಣಿತಶಾಸ್ತ್ರ ಅಧ್ಯಯನ ಮಂಡಳಿ | 5ನೇ ಸೆಮಿಸ್ಟರ್‌ನ ಕೌಶಲ್ಯಾಭಿವೃದ್ಧಿ ಪಠ್ಯಕ್ರಮ |
| 4 | ಸ್ನಾತಕ ಬಿವಿಎ/ಬಿಎಫ್ಎ ಅಧ್ಯಯನ ಮಂಡಳಿ | 5 ಮತ್ತು 6ನೇ ಸೆಮಿಸ್ಟರ್ |
| 5 | ಸ್ನಾತಕ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮಂಡಳಿ | 5 ಮತ್ತು 6ನೇ ಸೆಮಿಸ್ಟರ್ |

| ವಿಷಯ ಸಂಖ್ಯೆ: | 2023-24: ಸಾವಿವಿಪ-1: ಕಾ.ಅ.ಪ-01 ದಿನಾಂಕ: 22.12.2023 |
|---|---|

**ವಿಷಯ:-2024-25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕಗಳನ್ನು ಶೇ. 14% ಹೆಚ್ಚಿಸುವ ಕುರಿತು.**

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದ 2024-25ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಣ, ಹೊಸ ಕೋರ್ಸು, ವಿಷಯ, ಭಾಷೆಗಳು, ವಿದ್ಯಾರ್ಥಿ ಪ್ರವೇಶ ಪ್ರಮಾಣದ ವಿಸ್ತರಣೆ, ಕಾಲೇಜುಗಳ ಹೆಸರು ಬದಲಾವಣೆ, ಕಾಲೇಜಿನ ಸ್ಥಳ ಬದಲಾವಣೆ, ಶಾಶ್ವತ ಸಂಯೋಜನೆ, ಶಾಶ್ವತ ಸಂಯೋಜನೆ ನವೀಕರಣ ಹಾಗೂ ನೊಂದಾಯಿಸಲ್ಪಟ್ಟ ಶೈಕ್ಷಣಿಕ ಸಂಘ-ಸಂಸ್ಥೆಗಳು ಹೊಸ ಕಾಲೇಜನ್ನು ಪ್ರಾರಂಭಿಸುವ ಸಂಬಂಧ ಸಂಯೋಜನಾ ಶುಲ್ಕಗಳನ್ನು ಮಾನ್ಯ ಕುಲಪತಿಗಳು ವಿವಿಧ ವಿಶ್ವವಿದ್ಯಾನಿಲಯಗಳ ಸಂಯೋಜನಾ ಶುಲ್ಕಗಳನ್ನು ಪರಿಶೀಲಿಸಿ, ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2023-24ನೇ ಸಾಲಿನಲ್ಲಿ ಸಂಯೋಜನಾ ಶುಲ್ಕಗಳನ್ನು ಪರಿಷ್ಕರಿಸದಿರುವುದನ್ನು ಗಮನಿಸಿ, ಹಾಲಿ ಅಸ್ತಿತ್ವದಲ್ಲಿದ್ದ ಸಂಯೋಜನಾ ಶುಲ್ಕಗಳಿಗೆ ಶೇ. 14% ರಷ್ಟು ಹೆಚ್ಚಿಸಿರುತ್ತದೆ. ಪರಿಷ್ಕರಿಸಿರುವ ಕರಡು ಸಂಯೋಜನಾ ಶುಲ್ಕಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

2023-24ನೇ ಸಾಲಿನ ಸಂಯೋಜನೆಯ ಸಂದರ್ಭದಲ್ಲಿ ಸಂಯೋಜನಾ ಶುಲ್ಕವನ್ನು ಪರಿಷ್ಕರಿಸಿರುವುದಿಲ್ಲ ಎಂಬ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಗಿದೆ.

ಮುಂದುವರೆದು, B.Sc. in Fire and industrial safety ಕೋರ್ಸಿನ ಸಂಯೋಜನಾ ಶುಲ್ಕಕ್ಕೆ ಸಂಬಂಧಿಸಿದಂತೆ, ಕೆಳಕಂಡ ಮಾಹಿತಿಯನ್ನು ತಮ್ಮ ಗಮನಕ್ಕೆ ತರಲಾಗಿದೆ.

- ಬೆಂಗಳೂರು ವಿಶ್ವವಿದ್ಯಾನಿಲಯದ 2018-19ನೇ ಸಾಲಿನ ಸಂಯೋಜನಾ ಶುಲ್ಕಗಳಲ್ಲಿ Diploma in Industrial & Construction safety management ಕೋರ್ಸಿಗೆ ರೂ. 45,000/- ಗಳನ್ನು ಹಾಗೂ PG Diploma in Industrial & Construction safety management ಕೋರ್ಸಿಗೆ ರೂ. 60,000/- ಗಳನ್ನು ಶುಲ್ಕಗಳನ್ನು ನಿಗದಿಪಡಿಸಲಾಗಿರುತ್ತದೆ.
- ಮೂರು ವರ್ಷಗಳ B.Sc. in Fire and industrial safety ಕೋರ್ಸಿನ ಸಂಯೋಜನಾ ಶುಲ್ಕಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯದ ಅನ್ಯ ವಿಶ್ವವಿದ್ಯಾನಿಲಯಗಳಲ್ಲಿ ಪರಿಶೀಲಿಸಲಾಗಿದ್ದು, ಯಾವುದೇ ವಿಶ್ವವಿದ್ಯಾನಿಲಯಗಳಲ್ಲಿ ಸದರಿ ಕೋರ್ಸಿನ ಸಂಯೋಜನಾ ಶುಲ್ಕ ನಿಗದಿ ಕುರಿತು ಮಾಹಿತಿಯು ಲಭ್ಯವಿರುವುದಿಲ್ಲ.
- ಆದರೆ, ತಮಿಳುನಾಡಿನ ಮತ್ತು ಇತರೆ ವಿಶ್ವವಿದ್ಯಾನಿಲಯಗಳಲ್ಲಿ ಸದರಿ ಕೋರ್ಸಿನ ಪ್ರವೇಶಾತಿಗೆ (Admission Fee) ಸಂಬಂಧಿಸಿದಂತೆ, ರೂ. 20,000/- ರಿಂದ ರೂ. 2,50,000/- ರವರೆಗೆ ಶುಲ್ಕಗಳನ್ನು ನಿಗದಿಪಡಿಸಲಾಗಿರುತ್ತದೆ.

ಹಾಗೂ ಸಂಯೋಜಿತ ಕಾಲೇಜಿನಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ Master of Computer Application (M.C.A.) ಕೋರ್ಸಿನ ಸಂಯೋಜನಾ ಶುಲ್ಕಕ್ಕೆ ಸಂಬಂಧಿಸಿದಂತೆ, ಕೆಳಕಂಡ ಮಾಹಿತಿಯನ್ನು ತಮ್ಮ ಗಮನಕ್ಕೆ ತರಲಾಗಿದೆ.

- MCA ಕೋರ್ಸಿನ ಬಗ್ಗೆ ಅನ್ಯ ವಿಶ್ವವಿದ್ಯಾನಿಲಯಗಳಲ್ಲಿ ಪರಿಶೀಲಿಸಲಾಗಿದ್ದು, MBA ಕೋರ್ಸಿನ ಸಂಯೋಜನಾ ಶುಲ್ಕದಷ್ಟೇ MCA ಕೋರ್ಸಿನ ಸಂಯೋಜನಾ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ.
- ಅದೇ ರೀತಿಯಾಗಿ ತುಮಕೂರು ವಿಶ್ವವಿದ್ಯಾನಿಲಯದಲ್ಲೂ ಸಹ MBA ಕೋರ್ಸಿನ ಸಂಯೋಜನಾ ಶುಲ್ಕದಷ್ಟೇ MCA ಕೋರ್ಸಿನ ಸಂಯೋಜನಾ ಶುಲ್ಕವನ್ನು ನಿಗದಿಪಡಿಸಲು ತಮ್ಮ ಅವಗಾಹನೆಗೆ ತರಲಾಗಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಸಭೆಯ ಗಮನಕ್ಕೆ ತರುತ್ತಾ, 2023-24ನೇ ಸಾಲಿನಲ್ಲಿದ್ದ ಸಂಯೋಜನಾ ಶುಲ್ಕಗಳಿಗೆ ಶೇ. 14% ರಷ್ಟು ಹೆಚ್ಚಿಸಿ, 2024-25ನೇ ಸಾಲಿನ ಸಂಯೋಜನಾ ಶುಲ್ಕವನ್ನು ನಿಗದಿಪಡಿಸುವ ಕುರಿತು ಹಾಗೂ B.Sc. in Fire and industrial safety ಕೋರ್ಸಿನ ಹಾಗೂ Master of Computer Application (M.C.A.) ಕೋರ್ಸಿನ ಸಂಯೋಜನಾ ಶುಲ್ಕಗಳನ್ನು ನಿಗದಿಪಡಿಸುವ ಕುರಿತು ವಿದ್ಯಾವಿಷಯಕ ಪರಿಷತ್ತು ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2023-24, ಸಾ.ವಿ.ಪ-01/ ಅ ವಿ-01 ದಿನಾಂಕ:22.12.2023 |
|---|---|

**ವಿಷಯ:** IFIA BHARTHಸಂಸ್ಥೆಯ Tumkur University Chapter ನ್ನು ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗದಲ್ಲಿ ಸ್ಥಾಪಿಸುವ ಕುರಿತು.

***

ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮಜೀವಶಾಸ್ತ್ರ ವಿಭಾಗದಲ್ಲಿ ಎರಡನೇ ಸೆಮಿಸ್ಟರ್‌ನಲ್ಲಿ "Compulsory Skill based Value added Certificate Programme "Intellectural Property and patenting" ಎಂಬುವ ವಿಷಯವನ್ನು ಬೋಧಿಸುತ್ತಿದ್ದು, ಸದರಿ ವಿಷಯವು ವಿದ್ಯಾರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಅತ್ಯಂತ ಅವಶ್ಯಕವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಪ್ರೊಜೆಕ್ಟ್‌ಗಳಿಂದ ಪೇಟೆಂಟ್‌ಗಳನ್ನು ಪಡೆಯಲು ಅನುಕೂಲಕರವಾದ ವಾತಾವರಣವನ್ನು (Ecosystem)ಕಲ್ಪಿಸುತ್ತದೆ. ಈ ವಾತಾವರಣವನ್ನು ಸದೃಢಪಡಿಸಲು IFIA BHARTH ಸಂಸ್ಥೆಯ ಸ್ಥಳೀಯ Chapterನ್ನು ವಿಭಾಗದಲ್ಲಿ ಸ್ಥಾಪಿಸಿದ್ದಲ್ಲಿ ವಿವಿಧ ವಿಭಾಗಗಳ ವಿದ್ಯಾರ್ಥಿಗಳಿಗೆ ಉದ್ಯೋಗ ಕಲ್ಪಿಸಲು ಹೆಚ್ಚಿನ ಅನುಕೂಲವಾಗಿರುತ್ತದೆ ಎಂದು ತಿಳಿಸಿ IFIA BHARTH ಸಂಸ್ಥೆಯ Tumkur University Chapter ನ್ನು ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮಜೀವಶಾಸ್ತ್ರ ವಿಭಾಗದಲ್ಲಿ ಸ್ಥಾಪಿಸಲು ವಿಭಾಗದ ಸಂಯೋಜಕರು ಮನವಿ ಸಲ್ಲಿಸಿರುತ್ತಾರೆ.

ಸದರಿ IFIA BHARTH, World Intellectural Property Organization (WIPO) ಸಂಸ್ಥೆಯವರಿಗೆ ಇ–ಮೇಲ್ ಮುಖಾಂತರ ಸಂಪರ್ಕಿಸಿ ಈ ಕೆಳಕಂಡ ಮಾಹಿತಿಯನ್ನು ಪಡೆಯಲಾಗಿದೆ.

- ಸದರಿ IFIA BHARTH ಅಧ್ಯಾಯವನ್ನು ಮುನ್ನಡೆಸಲು ಆವಿಷ್ಕಾರದ ಬಗ್ಗೆ ಉತ್ಸುಕರಾಗಿರುವ ಅಧ್ಯಾಪಕ ಸದಸ್ಯರು ಅಥವಾ ನಿರ್ವಾಹಕರನ್ನು ಗುರುತಿಸಬೇಕು. ಆ ವ್ಯಕ್ತಿಯು ಸ್ವಯಂ ಪ್ರೇರಿತನಾಗಿರಬೇಕು ಮತ್ತು ಕ್ಯಾಂಪಸ್‌ನಲ್ಲಿ ಹೊಸತನವನ್ನು ಉತ್ತೇಜಿಸಲು ಉತ್ಸುಕನಾಗಿರಬೇಕು.

- ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವ ನಾವೀನ್ಯತೆಗಳು ಮತ್ತು ಆವಿಷ್ಕಾರಗಳ ಬಗ್ಗೆ ಜಾಗೃತಿ ಮೂಡಿಸಲು ವಿದ್ಯಾರ್ಥಿ ರಾಯಭಾರಿಗಳ ತಂಡವನ್ನು ನೇಮಿಸಬೇಕು. ಈ ರಾಯಭಾರಿಗಳು ತರಗತಿಗಳು, ವಿದ್ಯಾರ್ಥಿ ಗುಂಪುಗಳು ಮತ್ತು ಸ್ಥಳೀಯ ಸಮುದಾಯಗಳಿಗೆ ಸುದ್ದಿಗಳನ್ನು ಹಂಚಿಕೊಳ್ಳಲು ಮತ್ತು ಹೊಸತನವನ್ನು ಹೈಲೈಟ್ ಮಾಡಲು ಭೇಟಿ ನೀಡಬೇಕು.

- ಆವಿಷ್ಕಾರದ ಅಧ್ಯಯನಕ್ಕಾಗಿ ಕಾರ್ಯನಿರ್ವಹಿಸಲು ಸಣ್ಣ ಕಚೇರಿಯನ್ನು ಹೊಂದಿರಬೇಕು. ಆ ಸ್ಥಳದಲ್ಲಿ ಕೂಟಗಳು, ಸಭೆಗಳು ಇತ್ಯಾದಿಗಳನ್ನು ಆಯೋಜಿಸಬಹುದು. ಸಂದರ್ಶಕರಿಗಾಗಿ ಪ್ರದರ್ಶಿಸಬಹುದಾದ ಹೆಚ್ಚಿನ ನಾವೀನ್ಯತೆಗಳು /ಉತ್ಪನ್ನಗಳನ್ನು ಸಂಗ್ರಹಿಸಬಹುದು ಮತ್ತು ನಿರೀಕ್ಷಿತ ಸದಸ್ಯರಿಗೆ ಪ್ರೇರಕರಾಗಿ ಕಾರ್ಯನಿರ್ವಹಿಸಬಹುದು.

- ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಇತರ ಸಂಭಾವ್ಯ ವೈಯಕ್ತಿಕ ಮತ್ತು ಸಾಂಸ್ಥಿಕ ಸದಸ್ಯರಿಗೆ IFIA ಸದಸ್ಯತ್ವ ಫಾರ್ಮ್‌ಗಳನ್ನು ವಿತರಿಸಬೇಕು. ಹೀಗೆ ಸಂಗ್ರಹಿಸಿದ ಶುಲ್ಕವನ್ನು IFIA ಭಾರತ್ ವಿವಿಯ ಅಧ್ಯಾಯಕ್ಕೆ ನಿರ್ದಿಷ್ಟವಾಗಿ ನಾವೀನ್ಯತೆಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ 30% ಮೊತ್ತವನ್ನು ಹಿಂತಿರುಗಿಸಲಾಗುತ್ತದೆ. ಎಲ್ಲಾ ಪಾವತಿಗಳನ್ನು Yenelik ನಿಂದ ಸಂಗ್ರಹಿಸಲಾಗುತ್ತದೆ. ಫೌಂಡೇಶನ್ ಮತ್ತು ಸಂಗ್ರಹಿಸಿದ ಶುಲ್ಕದ ವಿವರಗಳನ್ನು ವಿಶ್ವವಿದ್ಯಾಲಯದೊಂದಿಗೆ ಹಂಚಿಕೊಳ್ಳಲಾಗುತ್ತದೆ.

- ಕ್ಯಾಂಪಸ್‌ನಲ್ಲಿ ಆವಿಷ್ಕಾರಗಳಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರನ್ನು ತೊಡಗಿಸಿಕೊಳ್ಳಲು ಮತ್ತು ಉತ್ಸಾಹವನ್ನು ಉಂಟುಮಾಡಲು ಆಗಾಗ್ಗೆ ನಾವೀನ್ಯತೆ ಕುರಿತಾದ ಮಾತುಕತೆಗಳು, ಕಾರ್ಯಾಗಾರಗಳು ಮತ್ತು ಇತರ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಇತರೆ ಲ್ಯಾಬ್‌ಗಳು, ಮೇಕರ್ ಸ್ಪೇಸ್‌ಗಳು, ಲೈಬ್ರರಿ, ವೃತ್ತಿ ಕೇಂದ್ರ ಮತ್ತು ನಾವೀನ್ಯತೆ ಅಧ್ಯಾಯದೊಂದಿಗೆ ಸಹಕರಿಸುವ ಮತ್ತು ಬೆಂಬಲಿಸುವ ಇತರ ಗುಂಪುಗಳೊಂದಿಗೆ ಸಂಬಂಧಗಳನ್ನು ಬೆಸೆಯಲಾಗುತ್ತದೆ.

- ಅಧ್ಯಾಯಕ್ಕೆ ಮಾರ್ಗದರ್ಶನ ಮತ್ತು ಸಂಪರ್ಕಗಳನ್ನು ಒದಗಿಸಲು ವಿವಿಧ ಅಧ್ಯಾಪಕರು ಮತ್ತು ಸ್ಥಳೀಯ ನವೋದ್ಯಮಿಗಳು/ಉದ್ಯಮಿಗಳ ಸಲಹಾ ಮಂಡಳಿಯನ್ನು ರಚಿಸಿ ಆ ಸಮಿತಿಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಆಯೋಜಿಸಬೇಕು.

- ವಿಶ್ವವಿದ್ಯಾನಿಲಯದ ಆವಿಷ್ಕಾರ ಪರಿಸರ ವ್ಯವಸ್ಥೆಯನ್ನು ದೀರ್ಘಾವಧಿಗೆ ಬೆಂಬಲಿಸಲು ಬೆಳವಣಿಗೆಯ ಗುರಿಗಳು, ಹಣಕಾಸಿನ ಅಗತ್ಯಗಳು, ಸಿಬ್ಬಂದಿ, ಸೌಲಭ್ಯಗಳು/ಸ್ಪೇಸ್ ಮತ್ತು ಇತರ ಸಮರ್ಥನೀಯ ಅಂಶಗಳನ್ನು ಒಳಗೊಂಡಂತೆ

ಅಧ್ಯಾಯಕ್ಕಾಗಿ ಬಹು–ವರ್ಷದ ಕಾರ್ಯತಂತ್ರದ ಯೋಜನೆಯನ್ನು ಅಭಿವೃದ್ಧಿಪಡಿಸಲು ಸಹಕರಿಸಲಾಗುತ್ತದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ IFIA BHARTH ವಿವಿಗೆ ಸಹಕರಿಸುತ್ತದೆ.

- ಇಂಟರ್‌ನ್ಯಾಷನಲ್ ಫೆಡರೇಶನ್ ಆಫ್ ಇನ್ವೆಂಟರ್ಸ್ ಅಸೋಸಿಯೇಷನ್ ಇವರು ವಿವಿಧ ಸಂಶೋಧಕರನ್ನು ಒಂದುಗೂಡಿಸುವುದರ ಜೊತೆಗೆ ಸೃಜನಶೀಲತೆಯ ಮೂಲಕ ಸುಸ್ಥಿರ ಅಭಿವೃದ್ಧಿಯನ್ನು ಮುನ್ನಡೆಸಲು ಸಹಕಾರಿಯಾಗಿರುತ್ತದೆ.

- IFIA ಧ್ಯೇಯವು ಆವಿಷ್ಕಾರಕರನ್ನು ಅನುಮೋದಿಸುವುದು, Intellectural Property ಹಕ್ಕುಗಳನ್ನು ಎತ್ತಿಹಿಡಿಯುವುದು ಮತ್ತು ಪೋಷಣೆಯನ್ನು ಒಳಗೊಂಡಿರುತ್ತದೆ, ಶೈಕ್ಷಣಿಕ ಮತ್ತು ಕೈಗಾರಿಕೆಗಳು ಸಹಯೋಗ, ಸರ್ಕಾರಗಳ ಸಹಯೋಗದ ಮೂಲಕ ಸಾಧಿಸಲಾಗಿದೆ.

- IFIA ಯು ಯುನೈಟೆಡ್ ನೇಷನ್ಸ್ ಕಾನ್ಫರೆನ್ಸ್ ಆನ್ ಟ್ರೇಡ್ ನಲ್ಲಿ ವೀಕ್ಷಕ ಸ್ಥಾನಮಾನವನ್ನು ಹೊಂದಿದೆ ಮತ್ತು ಅಭಿವೃದ್ಧಿ ಮತ್ತು World Intellectural Property Organization (WIPO) ಮತ್ತು ವಿಶ್ವಸಂಸ್ಥೆಯ ಕೈಗಾರಿಕಾ ಅಭಿವೃದ್ಧಿಯೊಂದಿಗೆ ಸಲಹಾ ಸ್ಥಾನಮಾನ ಸಂಸ್ಥೆ UNICEF NGO ಸಮಿತಿಯ ಸದಸ್ಯನಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಜೊತೆಗೆ Subchapter and Individual Membership ನ Subchapter Sponsor ನಲ್ಲಿ Professional Membership ಪಡೆಯಲು/ಪಾವತಿಗೆ ವಿಶ್ವವಿದ್ಯಾನಿಲಯಗಳಿಗೆ ರೂ.10,000/–ಗಳನ್ನು ನಮೂದಿಸಿರುತ್ತಾರೆ.

ಮೇಲ್ಕಂಡ ವಿವರಗಳನ್ವಯ IFIA BHARTH, World Intellectural Property Organization (WIPO) ಸಂಸ್ಥೆಯ Tumkur University Chapter ನ್ನು ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮ ಜೀವಶಾಸ್ತ್ರ ವಿಭಾಗದಲ್ಲಿ ಸ್ಥಾಪಿಸುವ ಸಂಬಂಧದ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2023-24/ಸಾ.ವಿ.ಪ-01/ಅ.ವಿ-02/22.12.2023 |
|---|---|

ವಿಷಯ: **Tumkur University (Prevention, Prohibition and Redressal of Sexual Harassment of the Women Employees and the Students)** ರೆಗ್ಯುಲೇಷನ್ಸ್ ಅನುಮೋದಿಸುವ ಕುರಿತು.

* * * * *

ತುಮಕೂರು ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ. ಮಾರ್ಗಸೂಚಿಯನುಸಾರ ಅಗತ್ಯವಿರುವ **Tumkur University (Prevention, Prohibition and Redressal of Sexual Harassment of the Women Employees and the Students)** ಸಿದ್ಧಪಡಿಸುವ ಸಂಬಂಧ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರನ್ನೊಳಗೊಂಡ ಸಮಿತಿಯನ್ನು ರಚಿಸಿ ದಿನಾಂಕ:17.11.2023 ರಂದು ಅಧಿಸೂಚನೆ ಹೊರಡಿಸಲಾಗಿತ್ತು.

ಈ ಸಂಬಂಧ ರಚನೆಗೊಂಡ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ವಿಶ್ವವಿದ್ಯಾನಿಲಯದ ಮಹಿಳಾ ದೂರು ನಿವಾರಣಾ ಸಮಿತಿ ಅಧ್ಯಕ್ಷರು, Anti-Ragging Cell ನ ಅಧ್ಯಕ್ಷರು, ಸದಸ್ಯರು ಹಾಗೂ Student Grievances Cell ನ ಸಂಯೋಜಕರು ದಿನಾಂಕ:04.12.2023 ರಂದು ವಿಶ್ವವಿದ್ಯಾನಿಲಯದಲ್ಲಿ ಸಭೆ ಸೇರಿ ವಿಶ್ವವಿದ್ಯಾನಿಲಯದಿಂದ ಸಿದ್ಧಪಡಿಸಲಾದ ಕರಡು Tumkur University (Prevention, Prohibition and Redressal of Sexual Harassment of the Women Employees and the Students) Regulations ನ್ನು ವಿವರವಾಗಿ ಪರಿಶೀಲಿಸಿ, ಚರ್ಚಿಸಿ, ವಿಶ್ವವಿದ್ಯಾನಿಲಯದ ಪ್ರಾಧಿಕಾರದ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸರ್ವಾನುಮತದಿಂದ ನಿರ್ಣಯಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಿಂದ ರಚಿಸಲಾದ ಕರಡು **Tumkur University (Prevention, Prohibition and Redressal of Sexual Harassment of the Women Employees and the Students) Regulations** ನ ಅನುಮೋದನೆಗಾಗಿ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಗೆ ಮಂಡಿಸಿದೆ.

| ವಿಷಯ ಸಂಖ್ಯೆ | 2023–24/ಸಾ.ವಿ.ಪ–01/ಅ.ವಿ–03/22.12.2023 |
|---|---|

**ವಿಷಯ: Tumkur University Regulations for Redressal of Grievances of Students-2023 ಅನುಮೋದಿಸುವ ಕುರಿತು.**

* * * * *

ತುಮಕೂರು ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ. ಮಾರ್ಗಸೂಚಿಯನುಸಾರ ಅಗತ್ಯವಿರುವ **Tumkur University Regulations for Redressal of Grievances of Students-2023** ಸಿದ್ಧಪಡಿಸುವ ಸಂಬಂಧ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರನ್ನೊಳಗೊಂಡ ಸಮಿತಿಯನ್ನು ರಚಿಸಿ ದಿನಾಂಕ:17.11.2023 ರಂದು ಅಧಿಸೂಚನೆ ಹೊರಡಿಸಲಾಗಿತ್ತು.

ಈ ಸಂಬಂಧ ರಚನೆಗೊಂಡ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ವಿಶ್ವವಿದ್ಯಾನಿಲಯದ ಮಹಿಳಾ ದೂರು ನಿವಾರಣಾ ಸಮಿತಿ ಅಧ್ಯಕ್ಷರು, Anti-Ragging Cell ನ ಅಧ್ಯಕ್ಷರು, ಸದಸ್ಯರು ಹಾಗೂ Student Grievances Cell ನ ಸಂಯೋಜಕರು ದಿನಾಂಕ:04.12.2023 ರಂದು ವಿಶ್ವವಿದ್ಯಾನಿಲಯದಲ್ಲಿ ಸಭೆ ಸೇರಿ ವಿಶ್ವವಿದ್ಯಾನಿಲಯದಿಂದ ಸಿದ್ಧಪಡಿಸಲಾದ ಕರಡು Tumkur University Regulations for Redressal of Grievances of Students-2023 ನ್ನು ವಿವರವಾಗಿ ಪರಿಶೀಲಿಸಿ, ಚರ್ಚಿಸಿ, ವಿಶ್ವವಿದ್ಯಾನಿಲಯದ ಪ್ರಾಧಿಕಾರದ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸರ್ವಾನುಮತದಿಂದ ನಿರ್ಣಯಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಿಂದ ರಚಿಸಲಾದ ಕರಡು **Tumkur University Regulations for Redressal of Grievances of Students-2023** ನ ಅನುಮೋದನೆಗಾಗಿ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಗೆ ಮಂಡಿಸಿದೆ.

| ವಿಷಯ ಸಂಖ್ಯೆ | 2023–24/ಸಾ.ವಿ.ಪ–01/ಅ.ವಿ–04/22.12.2023 |
|---|---|

**ವಿಷಯ: Tumkur University Regulation on Curbing the Menace of Ragging-2023 ಅನುಮೋದಿಸುವ ಕುರಿತು.**

* * * * *

ತುಮಕೂರು ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ. ಮಾರ್ಗಸೂಚಿಯನುಸಾರ ಅಗತ್ಯವಿರುವ Tumkur University Regulation on Curbing the Menace of Ragging-2023 ಸಿದ್ಧಪಡಿಸುವ ಸಂಬಂಧ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರನ್ನೊಳಗೊಂಡ ಸಮಿತಿಯನ್ನು ರಚಿಸಿ ದಿನಾಂಕ:17.11.2023 ರಂದು ಅಧಿಸೂಚನೆ ಹೊರಡಿಸಲಾಗಿತ್ತು.

ಈ ಸಂಬಂಧ ರಚನೆಗೊಂಡ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ವಿಶ್ವವಿದ್ಯಾನಿಲಯದ ಮಹಿಳಾ ದೂರು ನಿವಾರಣಾ ಸಮಿತಿ ಅಧ್ಯಕ್ಷರು, Anti-Ragging Cell ನ ಅಧ್ಯಕ್ಷರು, ಸದಸ್ಯರು ಹಾಗೂ Student Grievances Cell ನ ಸಂಯೋಜಕರು ದಿನಾಂಕ:04.12.2023 ರಂದು ವಿಶ್ವವಿದ್ಯಾನಿಲಯದಲ್ಲಿ ಸಭೆ ಸೇರಿ ವಿಶ್ವವಿದ್ಯಾನಿಲಯದಿಂದ ಸಿದ್ಧಪಡಿಸಲಾದ ಕರಡು Tumkur University Regulation on Curbing the Menace of Ragging-2023 ನ್ನು ವಿವರವಾಗಿ ಪರಿಶೀಲಿಸಿ, ಚರ್ಚಿಸಿ, ವಿಶ್ವವಿದ್ಯಾನಿಲಯದ ಪ್ರಾಧಿಕಾರದ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸರ್ವಾನುಮತದಿಂದ ನಿರ್ಣಯಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಿಂದ ರಚಿಸಲಾದ ಕರಡು **Tumkur University Regulation on Curbing the Menace of Ragging-2023** ನ ಅನುಮೋದನೆಗಾಗಿ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಗೆ ಮಂಡಿಸಿದೆ.

| ವಿಷಯ ಸಂಖ್ಯೆ | 2023–24/ಸಾ.ವಿ.ಪ–01/ಅ.ವಿ–05/22.12.2023 |
|---|---|

**ವಿಷಯ: ದಿನಾಂಕ:05.12.2023 ರಂದು ನಡೆದ ವಿಶ್ವವಿದ್ಯಾನಿಲಯದ ಇನ್‌ಕ್ಯುಬೇಷನ್ ಸೆಂಟರ್ ಸಲಹಾ ಸಮಿತಿ ಶಿಫಾರಸ್ಸು ಕುರಿತು.**

* * * * *

ವಿಶ್ವವಿದ್ಯಾನಿಲಯದ ಇನ್‌ಕ್ಯುಬೇಷನ್ ಸೆಂಟರ್‌ನ ಸಲಹಾ ಸಮಿತಿಯು ದಿನಾಂಕ:05.12.2023 ರಂದು ಸಭೆ ಸೇರಿ ವಿಶ್ವವಿದ್ಯಾನಿಲಯದ ಇನ್‌ಕ್ಯುಬೇಷನ್ ಸೆಂಟರ್‌ಗೆ ಸಂಬಂಧಿಸಿದಂತೆ ರಚಿಸಲಾದ ಕೆಳಕಂಡ ನಿಯಮಗಳನ್ನು ಸುಧೀರ್ಘವಾಗಿ ಚರ್ಚಿಸಿ, ಅಗತ್ಯ ಮಾರ್ಪಾಡುಗಳೊಂದಿಗೆ ಸರ್ವಾನುಮತದಿಂದ ಅನುಮೋದಿಸಿರುತ್ತದೆ.

1. Intellectual Property Rights Policy, and Establishment of IPR Office at Tumkur University Tumakuru
2. Institutional Innovation Council (IIC) Policy
3. Incubation, Innovation & Entrepreneurship Cell (IIEC)

ಮುಂದುವರೆದು, ಸಲಹಾ ಸಮಿತಿಯು ವಿಶ್ವವಿದ್ಯಾನಿಲಯದ ಇನ್‌ಕ್ಯುಬೇಷನ್ ಸೆಂಟರ್‌ಗೆ ಕೆಳಕಂಡ ನಾಮಧೇಯವೊಂದನ್ನು ಇಡಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ.

1. Innovate Tumkur for Sustainability (ITS)
2. Kalpataru Innovation Hub for Sustainability (KIHS)
3. Tumkur Innovation, Incubation & Entrepreneurship Council
4. Innovation, Incubation & Entrepreneurship Cell (IIEC)
5. Innovation, Incubation & Entrepreneurship Council (IIEC)

ಮೇಲ್ಕಂಡಂತೆ ದಿನಾಂಕ:05.12.2023 ರಂದು ನಡೆದ ವಿಶ್ವವಿದ್ಯಾನಿಲಯದ ಇನ್‌ಕ್ಯುಬೇಷನ್ ಸೆಂಟರ್ ಸಲಹಾ ಸಮಿತಿಯ ಶಿಫಾರಸ್ಸನ್ನು ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

| ವಿಷಯ ಸಖ್ಯೆ | 2023-24/ಸಾ.ವಿ.ಪ.-01: ಸಿಬ್ಬಂದಿ:01 ದಿನಾಂಕ:22.12.2023 |
|---|---|

**ವಿಷಯ:- ವಿಶ್ವವಿದ್ಯಾನಿಲಯಕ್ಕೆ ವಿಲೀನಗೊಂಡಿರುವ (ಘಟಕ ಕಾಲೇಜುಗಳ) ಸಿಬ್ಬಂದಿಗಳ ಹಳೇ ಪಿಂಚಣಿ ಯೋಜನೆ ಮತ್ತು ಇತರೆ ನಿವೃತ್ತಿ ಸೇವಾ ಸೌಲಭ್ಯಗಳನ್ನು ನೀಡುವ ಕುರಿತು.**

* * * * *

ಸರ್ಕಾರವು ತುಮಕೂರು ಸರ್ಕಾರಿ ವಿಜ್ಞಾನ ಮತ್ತು ಕಲಾ ಕಾಲೇಜುಗಳನ್ನು ತುಮಕೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳೆಂದು ಆದೇಶ ಹೊರಡಿಸಿ ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಿಸಿದ ಹಿನ್ನೆಲೆಯಲ್ಲಿ ಸದರಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬೋಧಕ ಮತ್ತು ಬೇಧಕೇತರ ಸಿಬ್ಬಂದಿಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ದ ಪ್ರಕರಣ 82(3) ರಲ್ಲಿನಂತೆ ವಿಶ್ವವಿದ್ಯಾನಿಲಯದ ಸೇವೆಯಲ್ಲಿ ಮುಂದುವರೆಸಲು ಇಚ್ಛಾಪತ್ರ ನೀಡಿದ್ದು, ಅದರಂತೆ ಸದರಿ ಸಿಬ್ಬಂದಿಗಳನ್ನು ನಿಯಮಾನುಸಾರ ವಿಶ್ವವಿದ್ಯಾನಿಲಯದ ಸೇವೆಗೆ ವಿಲೀನಿಕರಣಗೊಳಿಸಲು ಪರಿನಿಯಮಾವಳಿಯನ್ನು ರಚಿಸಿ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ದಿನಾಂಕ:23.04.2014 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಈ ಬಗ್ಗೆ ಸರ್ಕಾರದ ದಿನಾಂಕ:02.12.2015ರ ಪತ್ರದಲ್ಲಿ "ಸರ್ಕಾರದ ಆದೇಶ ಸಂಖ್ಯೆ:ಇಡಿ 118 ಯುಟಿಟಿ 2009, ದಿ:21.10.2010 ರಲ್ಲಿ ಮಂಜೂರು ಮಾಡಿರುವ ಹುದ್ದೆಗಳನ್ನು ಈಗ ಪ್ರಾಸ್ತಾಪಿಸಿರುವ ಪರಿನಿಯಮಗಳಲ್ಲಿ ಅಷ್ಟೇ ಹುದ್ದೆಗಳನ್ನು ಪ್ರಸ್ತಾಪಿಸಿ ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆ ಪಡೆದು ಹೊಸ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ" ಸೂಚಿಸಿದೆ ಮೇರೆಗೆ ಮಾರ್ಪಾಡುಗೊಳಿಸಿ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಕೋರಿ ದಿನಾಂಕ:12.05.2016ರಂದು ಸರ್ಕಾರಕ್ಕೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಸರ್ಕಾರದ ದಿನಾಂಕ:31.08.2018ರ ಪತ್ರದಲ್ಲಿ "ವಿಶ್ವವಿದ್ಯಾನಿಲಯದ ಸಿಬ್ಬಂದಿಗಳಾಗಿ ಮುಂದುವರೆಯುವಲ್ಲಿ ಅಭಿಮತವನ್ನು ವ್ಯಕ್ತಪಡಿಸಿ ನಂತರದಲ್ಲಿ ಸದರಿ ಸೇವೆಯಲ್ಲಿ ವಿಲೀನ ಹೊಂದುವ ನೌಕರರನ್ನು ಸರ್ಕಾರಿ ನೌಕರರಾಗಿಯೇ ಪರಿಗಣಿಸಿ ಮುಂದುವರೆಸುವಲ್ಲಿ ಅವಕಾಶವಿಲ್ಲ. ಸರ್ಕಾರವು ಕಲ್ಪಿಸಿರುವ ಅಭಿಮತ ಆಯ್ಕೆಯಾನುಸಾರ ಇವರುಗಳು ವಿಶ್ವವಿದ್ಯಾನಿಲಯದ ಸಿಬ್ಬಂದಿಗಳಾಗಿ ಮುಂದುವರೆಯುವಲ್ಲಿ ಅಭಿಮತವನ್ನು ನೀಡುವುದರಿಂದ, ವಿಲೀನ ಹೊಂದುವ ದಿನಾಂಕದವರೆಗೆ ಸರ್ಕಾರದಡಿಯಲ್ಲಿ ಸಲ್ಲಿಸಿರುವ ಸೇವೆಗೆ ಸಂಬಂಧಿಸಿದಂತೆ ಮಾತ್ರ ಪ್ರೊರಾಟ ಪಿಂಚಣಿ ಸೌಲಭ್ಯವನ್ನು ಹೊಂದಲು ಕ.ನಾ.ಸೇ.ನ.ನಿಯಮ 235-ಎರನ್ವಯ ಅವಕಾಶಗಳಿದ್ದು, ವಿಶ್ವವಿದ್ಯಾನಿಲಯದ ಸೇವೆಗೆ ಸೇರಿದ ನಂತರದಲ್ಲಿ ಸದರಿ ವಿಶ್ವವಿದ್ಯಾನಿಲಯದಲ್ಲಿ ಜಾರಿಯಲ್ಲಿರುವ ಪಿಂಚಣಿ ನಿಯಮಗಳಿಗೆ ಬದ್ಧರಾಗಿರಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪರಿನಿಯಮ-10(ಎ)ರಲ್ಲಿ ಕಲ್ಪಿಸಿರುವ ಅವಕಾಶಗಳಂತೆ ವಿಶ್ವವಿದ್ಯಾನಿಲಯದಿಂದ ನಿವೃತ್ತಿ ವೇತನ ವಂತಿಗೆಯನ್ನು ಪಡೆದು ಹಿಂದಿನ ಡಿಫೈನ್ಡ್ ಪಿಂಚಣಿಯ ಯೋಜನೆಯನ್ನು ಮುಂದುವರೆಸುವಲ್ಲಿ ಅವಕಾಶಗಳು ಇರುವುದಿಲ್ಲ. ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತಿ ಹೊಂದಿದ ತರುವಾಯದಲ್ಲಿ ಮುನ್ನ ಸರ್ಕಾರದಡಿಯಲ್ಲಿ ಸಲ್ಲಿಸಿದ ಸೇವೆ ಸಂಬಂಧದಲ್ಲಿ ಮಾತ್ರ ಪ್ರೊರಾಟ ನಿವೃತ್ತಿ ಸೌಲಭ್ಯಗಳನ್ನು ಮಹಾಲೇಖಪಾಲರು ಅಧೀಕರಿಸಲು ಅವಕಾಶವಿರುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ಅಭಿಮತ ಆಯ್ಕೆಯನ್ನು ಸರ್ಕಾರವು ಕಲ್ಪಿಸಿರುವುದರಿಂದ ವೇತನ ರಕ್ಷಣೆಯನ್ನು ಪರಿಗಣಿಸಬಹುದಾಗಿದೆ. ಆದುದರಿಂದ ಪೂರ್ವ ಪ್ರಾಸ್ತಾಪಿತ ಪರಿನಿಯಮಗಳ ಪರಿನಿಯಮ-10ನ್ನು ಹಾಗೂ ಪರಿನಿಯಮ-15ನ್ನು ಪರಿಷ್ಕರಿಸುವಂತೆ ತಿಳಿಸಲಾಗಿದೆ ಹಾಗೂ ದಿನಾಂಕ:12.02.2019ರ ಸರ್ಕಾರದ ಪತ್ರದಲ್ಲೂ ಸಹ ಮೇಲ್ಕಂಡ ಅಂಶಗಳನ್ನೇ ಪುನರುಚ್ಚರಿಸಲಾಗಿದೆ ಎಂದು ತಿಳಿಸಲಾಗಿದೆ.

ಮೇಲ್ಕಂಡ ಸರ್ಕಾರದ ಪತ್ರಗಳ ಮೇರೆಗೆ ತುಮಕೂರು ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಿಲೀನಗೊಳ್ಳಲು ಇಚ್ಛಿಸಿ, ಇಚ್ಛಾಪತ್ರ ನೀಡಿದ ತುಮಕೂರಿನ ಸರ್ಕಾರಿ ವಿಜ್ಞಾನ ಮತ್ತು ಕಲಾ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಸೇವಾ ಸೌಲಭ್ಯಗಳಿಂದ ವಂಚಿತರಾಗಿರುವ ಬಗ್ಗೆ ವಿವರಿಸಿ, ಪ್ರಸ್ತಾಪಿತ ಅಂಶಗಳನ್ನು ಸಹಾನುಭೂತಿಯಿಂದ ಪುನರ್ ಪರಿಶೀಲಿಸಿ ಹಾಗೂ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಈಗಾಗಲೇ ಸುಮಾರು 08 ವರ್ಷಗಳಿಂದ ವೇತನವನ್ನು ಹೊರತುಪಡಿಸಿ, ಉಳಿದ ಯಾವುದೇ ರೀತಿಯ ಸವಲತ್ತುಗಳಿಲ್ಲದೆ ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುತ್ತಿರುವ ತುಮಕೂರಿನ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಿಂದ ವಿಶ್ವವಿದ್ಯಾನಿಲಯದ ಸೇವೆಯಲ್ಲಿ ಹಸ್ತಾಂತರಗೊಂಡ ಸಿಬ್ಬಂದಿಗಳಲ್ಲಿ ಅರ್ಹ ಸಿಬ್ಬಂದಿಗಳಿಗೆ ಹಳೇ ಪಿಂಚಣಿ ಯೋಜನೆಯನ್ನು ವಿಸ್ತರಿಸಲು ಅನುಮತಿಸುವಂತೆ ದಿನಾಂಕ:31.12.2018ರ ಹಾಗೂ ದಿನಾಂಕ:16.03.2019ರ ಕಚೇರಿ ಪತ್ರಗಳಲ್ಲಿ ಕೋರಲಾಗಿತ್ತು. ಆದಗ್ಯೂ ಸರ್ಕಾರವು ದಿನಾಂಕ:16.05.2019ರ ಪತ್ರದಲ್ಲಿ ಸರ್ಕಾರದ ಹಿಂದಿನ ಪತ್ರಗಳಲ್ಲಿನ ಅಂಶಗಳನ್ನೇ ಪುನರುಚ್ಚರಿಸಿ ಪರಿಷ್ಕೃತ ಪರಿನಿಯಮಗಳೊಂದಿಗೆ ಮರು ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿರುತ್ತದೆ.

ತುಮಕೂರಿನ ಸರ್ಕಾರಿ ವಿಜ್ಞಾನ ಮತ್ತು ಕಲಾ ಕಾಲೇಜುಗಳಿಂದ ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಿಲೀನಗೊಂಡ ಸಿಬ್ಬಂದಿಗಳಲ್ಲಿ 14 ಸಿಬ್ಬಂದಿಗಳು ವಿಶ್ವವಿದ್ಯಾನಿಲಯಕ್ಕೆ ದಿನಾಂಕ:10.10.2019 ರಂದು ಮನವಿ ಸಲ್ಲಿಸಿ "ವಿಶ್ವವಿದ್ಯಾನಿಲಯದ ಸೇವೆಯಲ್ಲಿ ಮುಂದುವರೆಯಲಿಚ್ಛಿಸಿ ಮುಂದುವರೆಯುತ್ತಿರುವ ನಮಗೆ ಸರ್ಕಾರದಿಂದ ಸೇವಾ ವಿಲೀನಿಕರಣದ ಅಂತಿಮ ಆದೇಶ ಇದುವರೆವಿಗೂ ಆಗಿರುವುದಿಲ್ಲ. ವಿಲೀನಗೊಂಡ ಕೆಲವು ಬೋಧಕ ಮತ್ತು ಬೋಧಕೇತರ ನೌಕರರು ತುಮಕೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುತ್ತಾರೆ. ಇಬ್ಬರು ಅಕಾಲಿಕ ಮರಣ ಹೊಂದಿರುತ್ತಾರೆ. ಸದರಿ ನೌಕರರುಗಳಿಗೆ ಬರಬೇಕಾದ ಯಾವುದೇ ಸೌಲಭ್ಯ ಮತ್ತು ಕ್ಲೈಮುಗಳು ಇದುವರೆವಿಗೂ ದೊರಕಿರುವುದಿಲ್ಲ. ಇದರಿಂದ ನಾವು ತುಂಬಾ ಗೊಂದಲ ಮತ್ತು ಆತಂಕಕ್ಕೊಳಗಾಗಿದ್ದು, ಸೇವಾ ವಿಲೀನೀಕರಣದ ಅಂತಿಮ ಆದೇಶಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಮೊರೆ ಹೋಗಲು ಅನುಮತಿ ನೀಡುವಂತೆ" ಕೋರಿದ ಮೇರೆಗೆ ಸದರಿ ಅಂಶವನ್ನು ದಿನಾಂಕ:29.01.2020ರ ಪತ್ರದಲ್ಲಿ ಸರ್ಕಾರದ ಅವಗಾಹನೆಗೆ ತರಲಾಗಿತ್ತು.

ತುಮಕೂರಿನ ಸರ್ಕಾರಿ ವಿಜ್ಞಾನ ಮತ್ತು ಕಲಾ ಕಾಲೇಜುಗಳಿಂದ ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಿಲೀನಗೊಂಡ ಸಿಬ್ಬಂದಿಗಳು ವಿಶ್ವವಿದ್ಯಾನಿಲಯದ ಕುಲಸಚಿವರಿಗೆ ವಿಳಾಸಿಸಿ, ಪ್ರತಿಯನ್ನು ಮಾಹಿತಿಗಾಗಿ ಘನತೆವೆತ್ತ ಕುಲಾಧಿಪತಿಗಳಿಗೆ ವಿಳಾಸಿಸಿರುವ ದಿನಾಂಕ:20.05.2020ರ ಮನವಿಯಲ್ಲಿ "ನ್ಯಾಯಯುತವಾಗಿ ಹಾಗೂ ಕಾನೂನು ಬದ್ಧವಾಗಿ ನಮಗೆ ಸಿಗಲೇಬೇಕಾದ ಹಳೆಯ ಪಿಂಚಣಿಯ ಯೋಜನೆಯ ಸೌಲಭ್ಯವನ್ನು ಹಾಗೂ ನಿವೃತ್ತಿಯ ನಂತರ ದೊರೆಯಬೇಕಿರುವ ಎಲ್ಲಾ ಸೌಕರ್ಯಗಳನ್ನು ಮಂಜೂರು ಮಾಡಿಸಿಕೊಡಬೇಕಾಗಿ ಅಥವಾ ಮಾತೃ ಇಲಾಖೆಗೆ ಮರಳುವ ಅವಕಾಶ ಈಗಲೂ ಇದ್ದಲ್ಲಿ ನಮ್ಮ ಸೇವಾ ನಿರಂತರತೆ, ಸೇವಾ ಭದ್ರತೆ ಹಾಗೂ ಸೇವಾ ಜೇಷ್ಠತೆಗೆ ಚ್ಯುತಿಯಾಗದಂತೆ ಹಾಗೂ ಈಗಾಗಲೇ ಮರಣ ಹೊಂದಿರುವ ಮತ್ತು ನಿವೃತ್ತಿ ಹೊಂದಿರುವ ನೌಕರರ ಹಿತಾಸಕ್ತಿಗೂ ಧಕ್ಕೆಯಾಗದಂತೆ ನಿಯಮ ಹಾಗೂ ಕಾನೂನು ಬದ್ಧವಾಗಿ ಕಳುಹಿಸಿಕೊಡುವ ಸರ್ಕಾರಿ ಆದೇಶವನ್ನು ವಿಶ್ವವಿದ್ಯಾನಿಲಯದಿಂದಲೇ ಮಾಡಿಸಿ ಕೊಡುವಂತೆ ಕೋರಿದ್ದು, ಸದರಿ ಮನವಿಗೆದುರಾಗಿ ಘನವೆತ್ತ ಕುಲಾಧಿಪತಿಗಳ ಕಚೇರಿಯಿಂದ ಸ್ವೀಕೃತಗೊಂಡ ದಿನಾಂಕ:02.06.2020ರ ಪತ್ರದಲ್ಲಿ ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿದೆ.

ಈ ಹಿನ್ನೆಲೆಯಲ್ಲಿ ತುಮಕೂರಿನ ಸರ್ಕಾರಿ ವಿಜ್ಞಾನ ಮತ್ತು ಕಲಾ ಕಾಲೇಜುಗಳಿಂದ ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಿಲೀನಗೊಂಡ ಸಿಬ್ಬಂದಿಗಳು ಹಳೆಯ ಪಿಂಚಣಿಯ ಯೋಜನೆಯ ಸೌಲಭ್ಯವನ್ನು ಹಾಗೂ ನಿವೃತ್ತಿಯ ನಂತರ ದೊರೆಯಬೇಕಿರುವ ಎಲ್ಲಾ ಸೌಕರ್ಯಗಳನ್ನು ಮಂಜೂರು ಮಾಡಿಸಿಕೊಡಬೇಕಾಗಿ ಅಥವಾ ಮಾತೃ ಇಲಾಖೆಗೆ ಮರಳುವ ಅವಕಾಶ ಈಗಲೂ ಇದ್ದಲ್ಲಿ ನಮ್ಮ ಸೇವಾ ನಿರಂತರತೆ, ಸೇವಾ ಭದ್ರತೆ ಹಾಗೂ ಸೇವಾ ಜೇಷ್ಠತೆಗೆ ಚ್ಯುತಿಯಾಗದಂತೆ ಹಾಗೂ ಈಗಾಗಲೇ ಮರಣ ಹೊಂದಿರುವ ಮತ್ತು ನಿವೃತ್ತಿ ಹೊಂದಿರುವ ನೌಕರರ ಹಿತಾಸಕ್ತಿಗೂ ಧಕ್ಕೆಯಾಗದಂತೆ ನಿಯಮ ಹಾಗೂ ಕಾನೂನು ಬದ್ಧವಾಗಿ ಕಳುಹಿಸಿಕೊಡುವ ಸರ್ಕಾರಿ ಆದೇಶವನ್ನು ವಿಶ್ವವಿದ್ಯಾನಿಲಯದಿಂದಲೇ ಮಾಡಿಸಿ ಕೊಡುವಂತೆ ಕೋರಿ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿರುವ ಕುರಿತು ಸೂಕ್ತ ನಿರ್ದೇಶನ ಕೋರಿ ದಿನಾಂಕ: 30.07.2020 ರಂದು ಸರ್ಕಾರಕ್ಕೆ ಪತ್ರವನ್ನು ಬರೆಯಲಾಗಿ, ಸರ್ಕಾರವು ದಿನಾಂಕ:18.09.2020ರ ಪತ್ರದಲ್ಲಿ ಕೆಳಕಂಡಂತೆ ಉಲ್ಲೇಖಿಸಿರುತ್ತಾರೆ.

ನ್ಯಾಯಿಕ ಅನುಪಾತ ಹಾಗೂ ವಸ್ತುಸ್ಥಿತಿಯ ಆಧಾರದ ಮೇಲೆ ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಅನುಸರಿಸಿ Statutes pertaining to absorption of opted –in Teaching and Non-Teaching Staff of erstwhile Government Science & Arts Colleges, Tumkur into Tumkur University ಗಳ ಪರಿನಿಯಮ 10 ರಲ್ಲಿನ ಉಪಬಂಧ ಹಾಗೂ ಪರಿನಿಯಮ 15ರಲ್ಲಿನ ಉಪಬಂದವನ್ನು ಪರಿಷ್ಕರಿಸಿ ಹಾಗೂ ಪರಿನಿಯಮ 13ನ್ನು ಕೈಬಿಟ್ಟು ಈ ರೀತಿ ಪರಿಷ್ಕರಿಸಲಾಗುವ ಪರಿನಿಯಮಗಳಿಗೆ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಗಳ ಅನುಮೋದನೆ ಪಡೆದು ಮರು ಪ್ರಸ್ತಾವನೆಯನ್ನು ಸಲ್ಲಿಸುವಂತೆ ದಿನಾಂಕ:31.12.2018, 12.02.2019 ಹಾಗೂ 16.05.2019ರ ಪತ್ರಗಳಲ್ಲಿ ಪುನರುಚ್ಚರಿಸಲಾಗಿತ್ತು.

ಆದಗ್ಯಾ ದಿನಾಂಕ: 01.04.2006 ರ ಪೂರ್ವದಲ್ಲಿ ಸರ್ಕಾರಿ ಸೇವೆಗೆ ಸೇರಿ, ಸರ್ಕಾರದಿಂದ ಕಲ್ಪಿಸಲಾದ ಅಭಿಮತದ ಆಯ್ಕೆಗನುಸಾರ ತುಮಕೂರು ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಿಲೀನಗೊಂಡಿರುವ ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯನ್ನು ಹಳೆಯ ಪಿಂಚಣಿ ಯೋಜನೆಯಲ್ಲಿಯೇ ಮುಂದುವರೆಸಲು ಕೋರಿರುವುದು ವಿಷಾದನೀಯ. ಆದುದರಿಂದ ಸರ್ಕಾರದ ನಿರ್ದೇಶನಗಳಂತೆ ಪರಿಷ್ಕೃತ ನಿಯಮಗಳೊಂದಿಗೆ ಮರು ಪ್ರಸ್ತಾವನೆಯ ಹೊರತಾಗಿ ಇನ್ನು ಮುಂದೆ ಇಂತಹ ಧಾರುಣ ಅಸಾಧ್ಯವಾದ ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ ಪರಿಗಣಿಸಲಾಗುವುದಿಲ್ಲವೆಂದು ಸೂಚಿಸಿ ಈ ಹಿಂದಿನ ಪತ್ರಗಳಲ್ಲಿ ತಿಳಿಸಲಾಗಿರುವುದನ್ನೆ ಪುನರುಚ್ಚರಿಸಲಾಗಿದೆ

ಈ ಕುರಿತು ವಿಶ್ವವಿದ್ಯಾನಿಲಯದ ದಿನಾಂಕ:29.12.2021ರ ಪತ್ರದಲ್ಲಿ ತುಮಕೂರಿನ ಸರ್ಕಾರಿ ವಿಜ್ಞಾನ ಮತ್ತು ಕಲಾ ಕಾಲೇಜುಗಳಿಂದ ಸೇವೆಯಲ್ಲಿ ಮುಂದುವರೆದ ಸಿಬ್ಬಂದಿಗಳ ವಿಲೀನೀಕರಣಕ್ಕೆ ಸಂಬಂಧಿಸಿದ "Statute for absorption of opted in Teaching and Non-Teaching Staff of erstwhile Government Science College Tumkur and Government Arts College, Tumkur into Tumkur University service" ಪರಿನಿಯಮವನ್ನು ಸರ್ಕಾರಕ್ಕೆ ಘನತೆವೆತ್ತ ಕುಲಾಧಿಪತಿಗಳ ಅಂಕಿತದೊಂದಿಗೆ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.

ಈ ಸಂಬಂಧ ಸರ್ಕಾರದ ಪತ್ರ ಸಂಖ್ಯೆ:ಇಡಿ/04/ಯುಟಿಟಿ/2022 ದಿನಾಂಕ:21.01.2023ರಲ್ಲಿ "Statute for absorption of opted in Teaching and Non-Teaching Staff of erstwhile Government Science College Tumkur and Government Arts College, Tumkur into Tumkur University service" ಪರಿನಿಯಮ ಅನುಮೋದನೆಗೊಂಡಿದ್ದು, ಈ ಸಂಬಂಧ ವಿಶ್ವವಿದ್ಯಾನಿಲಯವು ದಿನಾಂಕ: 24.01.2023ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ.

**ಮುಂದುವರೆದು, ವಿಶ್ವವಿದ್ಯಾನಿಲಯ ಕಲಾ ಮತ್ತು ವಿಜ್ಞಾನ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ನೌಕರರು, (ತುಮಕೂರಿನ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಈ ಹಿಂದೆ ಸೇವೆ ಸಲ್ಲಿಸಿ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸೇರ್ಪಡೆಗೊಂಡಿರುವವರು) ದಿನಾಂಕ:08.11.2023 ರಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ, ಕರ್ನಾಟಕ ರಾಜ್ಯ ಉಚ್ಛನ್ಯಾಯಾಲಯ ಬೆಂಗಳೂರು, ರಿಟ್ ಪಿಟಿಷನ್ ಸಂಖ್ಯೆ:13001/2020ರ ಸಂಬಂಧ ದಿನಾಂಕ:03.10.2023 ರಂದು ನೀಡಿರುವ ತೀರ್ಪಿನ ಆದೇಶವನ್ನು ಲಗತ್ತಿಸಿ, ನಮ್ಮನ್ನು ಹಳೇ ಪಿಂಚಣಿ ಯೋಜನೆಯಡಿಯಲ್ಲಿ ಬರುವ ನೌಕರರೆಂದು ಪರಿಗಣಿಸಿರುತ್ತದೆ. ಆದ್ದರಿಂದ ಹಳೇ ಪಿಂಚಣಿ ಯೋಜನೆ ಹಾಗೂ ಇತರೆ ನಿವೃತ್ತಿ ಸಂಬಂಧಿತ ಸೇವಾ ಸೌಲಭ್ಯಗಳನ್ನು ನೀಡಲು ಸೂಕ್ತ ಕ್ರಮಕೈಗೊಂಡು ನಮಗೆ ಸಿಗಬೇಕಾದ ಸೌಲಭ್ಯಗಳನ್ನು ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ.**

ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2023-24/ವಿ.ವಿ:01 ಸಿಬ್ಬಂದಿ-02 ದಿನಾಂಕ:22.12.2023 |
|---|---|

**ವಿಷಯ: ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾದ ವಿಷಯದ ಸ್ಥಿರೀಕರಣದ ಕುರಿತು.**

*****

ತುಮಕೂರು ವಿಶ್ವವಿದ್ಯಾನಿಲಯವು 2004ರಲ್ಲಿ ಆರಂಭವಾಗಿ 20 ವರ್ಷಗಳನ್ನು ಪೂರೈಸುವ ಹೊಸ್ತಿಲಲ್ಲಿದೆ. ವಿಶ್ವವಿದ್ಯಾನಿಲಯವು ಯು.ಜಿ.ಸಿ ವತಿಯಿಂದ 12 'ಬಿ' ಅಡಿಯಲ್ಲಿ ಮಾನ್ಯತೆ ಪಡೆದಿದ್ದು, ಬಿ+ ಶ್ರೇಣಿಯೊಂದಿಗೆ ನ್ಯಾಕ್ ಮಾನ್ಯತೆ ಸಹ ಪಡೆದಿರುತ್ತದೆ. ಕೆಲವೇ ಬೋಧಕೇತರ ಸಿಬ್ಬಂದಿಗಳನ್ನು ಒಳಗೊಂಡು ಉತ್ತಮ ಆಡಳಿತ ನೀಡುತ್ತಾ, ಅನುಭವಿ ಅಧ್ಯಾಪಕರನ್ನು ಒಳಗೊಂಡು ಈಗಾಗಲೇ ದೇಶದ ಅತ್ಯುತ್ತಮ ವಿಶ್ವವಿದ್ಯಾನಿಲಯಗಳಲ್ಲಿ ನಮ್ಮ ವಿಶ್ವವಿದ್ಯಾನಿಲಯವೂ ಒಂದೆನಿಸಿದೆ. ತುಮಕೂರು ಜಿಲ್ಲೆಗೆ ಸೀಮಿತವಾಗಿರುವ ಈ ವಿಶ್ವವಿದ್ಯಾನಿಲಯದಲ್ಲಿ ಸುಮಾರು 40000 ವಿದ್ಯಾರ್ಥಿಗಳು ಇರುವಂತಹ 32 ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಎರಡು ಘಟಕ ಕಾಲೇಜುಗಳು, 150 ಬೋಧಕ ಸಿಬ್ಬಂದಿಗಳು ಹಾಗೂ 45 ಬೋಧಕೇತರ ಸಿಬ್ಬಂದಿಗಳನ್ನು ಒಳಗೊಂಡಿರುವ ವಿಶ್ವವಿದ್ಯಾನಿಲಯವು ಶೈಕ್ಷಣಿಕ ಹಾಗೂ ಸಂಶೋಧನಾ ಕ್ಷೇತ್ರಗಳಲ್ಲಿ ಬಹಳಷ್ಟು ಉತ್ತಮ ಎನಿಸುವಷ್ಟು ಚಟುವಟಿಕೆಗಳನ್ನು ನಡೆಸುತ್ತಾ ಬಂದಿದ್ದು, ಈಗಾಗಲೇ ಸಾಕಷ್ಟು ಹೊಸ ವಿಭಾಗಗಳು ಪ್ರಾರಂಭವಾಗಿರುತ್ತವೆ ಹಾಗೆಯೇ ತಿಪಟೂರು ಶಿರಾ ಸ್ನಾತಕೋತ್ತರ ಕೇಂದ್ರಗಳು ಸಹ ಪ್ರಾರಂಭಗೊಂಡಿರುತ್ತವೆ.

ಇದಲ್ಲದೆ ಶೈಕ್ಷಣಿಕ ವಿಭಾಗ, ಸಾಮಾನ್ಯ ವಿಭಾಗ, ಅಭಿವೃದ್ಧಿ ವಿಭಾಗ, ಕಾನೂನು ಕೋಶ, ಖರೀದಿ ಕೋಶ, ಸಿಬ್ಬಂದಿ ವಿಭಾಗ, ಸಿಂಡಿಕೇಟ್ ವಿಭಾಗ, ಕುಲಸಚಿವರು ಮತ್ತು ಕುಲಪತಿಯವರ ಆಪ್ತ ಶಾಖೆ, ಪಿಎಚ್.ಡಿ. ವಿಭಾಗ, ಹಣಕಾಸು ವಿಭಾಗ, ಐ.ಕ್ಯೂ.ಎ.ಸಿ.,ಕಾಲೇಜು ಅಭಿವೃದ್ಧಿ ವಿಭಾಗ, ಪಿ.ಎಂ.ಇ.ಬಿ., ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶನಾಲಯ, ಇಂಜಿನಿಯರಿಂಗ್ ವಿಭಾಗ, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ವಿವಿಧ ವಿದ್ಯಾರ್ಥಿನಿಲಯಗಳು, ಕ್ರೀಡೆ ಮತ್ತು ದೈಹಿಕ ಶಿಕ್ಷಣ, ಎನ್.ಎಸ್.ಎಸ್., ಪರೀಕ್ಷಾ ವಿಭಾಗ ಹೀಗೆ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಲ್ಲೂ ಕಾರ್ಯಭಾರ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು, ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಮಾತ್ರ ಸೀಮಿತವಾಗಿದೆ. ಇದರ ನಡುವೆ ಸದ್ಯದಲ್ಲೇ ಬಿದರಕಟ್ಟೆಯ ಹೊಸ ಕ್ಯಾಂಪಸ್‌ಗೆ ಹೆಜ್ಜೆ ಇಡಲು ಅಗತ್ಯ ತಯಾರಿ ಕೂಡ ನಡೆಯುತ್ತಿರುತ್ತದೆ. ಸರ್ಕಾರವು ಕೋರುವ ಯಾವುದೇ ಮಾಹಿತಿಯನ್ನು ನಿಗದಿತ ಸಮಯದಲ್ಲಿ ಒದಗಿಸುವಲ್ಲಿ ವಿಶ್ವವಿದ್ಯಾನಿಲಯವು ಮೊದಲಾಗಿದ್ದು, ಈ ಕುರಿತಾಗಿ ಪ್ರಶಂಸೆಗಳು ಸಹ ಸ್ವೀಕೃತಗೊಂಡಿವೆ.

ರಾಷ್ಟ್ರೀಯ ಶಿಕ್ಷಣ ನೀತಿ -2020 (NEP-2020) ನ್ನು ಹಾಗೂ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ Unified University and College Management System (UUCMS) ನ್ನು ಅಳವಡಿಸಿಕೊಂಡಿರುವುದರಿಂದ ಶೈಕ್ಷಣಿಕ ಮತ್ತ ಆಡಳಿತಾತ್ಮಕ ಕಾರ್ಯಗಳಲ್ಲಿ ಗಮನಾರ್ಹ ಹೆಚ್ಚಳ ಕಂಡುಬಂದಿದ್ದು, ತುಮಕೂರು ವಿಶ್ವವಿದ್ಯಾನಿಲಯವು ಬೋಧಕೇತರ ಸಿಬ್ಬಂದಿಯ ತೀವ್ರ ಕೊರತೆಯನ್ನು ಅನುಭವಿಸುತ್ತಿದೆ. ಇದರಿಂದಾಗಿ ವಿಶ್ವವಿದ್ಯಾನಿಲಯದ ಕಚೇರಿ ಕೆಲಸಗಳು ಸುಲಲಿತವಾಗಿ, ತ್ವರಿತಗತಿಯಲ್ಲಿ ಸಾಗಲು ಇರುವ ಕೆಲವೇ ಬೋಧಕೇತರ ಸಿಬ್ಬಂದಿಗಳಿಗೆ ಕಾರ್ಯಭಾರದ ಒತ್ತಡ ಉಂಟಾಗಿದ್ದು, ಹೆಚ್ಚುತ್ತಿರುವ ಕಾರ್ಯಭಾರಕ್ಕೆ ಅನುಗುಣವಾಗಿ ಕಾರ್ಯಕ್ಷಮತೆ ಮತ್ತು ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೆ ಸುಗಮವಾಗಿ ಕಾರ್ಯನಿರ್ವಹಿಸಲು ಉನ್ನತ ಹಂತಗಳಲ್ಲಿ (ಉಪಕುಲಸಚಿವರು, ಸಹಾಯಕ ಕುಲಸಚಿವರು, ಅಧೀಕ್ಷಕರು, ಇತ್ಯಾದಿ) ಹೆಚ್ಚಿನ ಬೋಧಕೇತರ ಸಿಬ್ಬಂದಿಯ ಅವಶ್ಯಕತೆ ಇದೆ. ಪ್ರಸ್ತುತ ಇರುವಂತಹ ಕೆಲವೇ ಬೋಧಕೇತರ ಸಿಬ್ಬಂದಿಗಳಿಂದಲೇ ಬಹಳಷ್ಟು ಒತ್ತಡದಲ್ಲಿ ಕಾರ್ಯ ನಿರ್ವಹಣೆ ಮಾಡಬೇಕಾದ ಅನಿವಾರ್ಯತೆ ಉದ್ಭವಿಸಿರುತ್ತದೆ. ಸರ್ಕಾರದ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಹಾಗೂ ದಕ್ಷ ಆಡಳಿತಕ್ಕೆ ಸಾಕಷ್ಟು ಮಾನವ ಸಂಪನ್ಮೂಲದ ಬೆಂಬಲದ ಅಗತ್ಯವಿರುತ್ತದೆ. ತುಮಕೂರು ವಿಶ್ವವಿದ್ಯಾನಿಲಯವು ಪ್ರಸ್ತುತ ಹೊಂದಿರುವ ಘಟಕ ಕಾಲೇಜುಗಳು, ಶಿರಾ ಹಾಗೂ ತಿಪಟೂರಿನ ಸ್ನಾತಕೋತ್ತರ ಕೇಂದ್ರಗಳು, ವಿಶ್ವವಿದ್ಯಾನಿಲಯದ ಆಡಳಿತ ವಿಭಾಗಗಳು ಮತ್ತು ಬಿದರಕಟ್ಟೆಯಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ಕ್ಯಾಂಪಸ್‌ನ ಸಮರ್ಥ ಆಡಳಿತಾತ್ಮಕ ನಿರ್ವಹಣೆಗಾಗಿ ಪ್ರಸ್ತುತ ಇರುವ ಬೋಧಕೇತರ ಹುದ್ದೆಗಳ ಸಂಖ್ಯೆಗಳನ್ನು ಕೋಷ್ಟಕದಲ್ಲಿರುವಂತೆ ಹೆಚ್ಚಿಸುವುದು ಅನಿವಾರ್ಯವಾಗಿರುವ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಿದ್ದು ಸದರಿ ವಿಷಯವನ್ನು ದಿನಾಂಕ:23.11.2023 ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಲಾಗಿತ್ತು.

ಪು.ತಿ.ನೋ

| ಕ್ರ.ಸಂ. | ಹುದ್ದೆಗಳು | ಮಂಜೂರಾದ ಹುದ್ದೆಗಳು | ಹೆಚ್ಚುವರಿ ಹುದ್ದೆಗಳು |
|---|---|---|---|
| 23. | ಉಪ ಕುಲಸಚಿವರು | 04 | 04 |
| 24. | ಸಹಾಯಕ ಕುಲಸಚಿವರು | 01 | 04 |
| 25. | ವ್ಯವಸ್ಥಾಪಕರು | 02 | 04 |
| 26. | ಅಧೀಕ್ಷಕರು | 09 | 03 |
| 27. | ಕಂಪ್ಯೂಟ್ ಪ್ರೋಗ್ರಾಮರ್ | 01 | 02 |
| 28. | ಕಂಪ್ಯೂಟ್ ಆಪರೇಟರ್ | 02 | 02 |
| 29. | ಪ್ರಥಮ ದರ್ಜೆ ಸಹಾಯಕರು | 16 | 10 |
| 30. | ಪ್ರಯೋಗಾಲಯ ಸಹಾಯಕರು | 08 | 04 |
| 31. | ದ್ವಿತೀಯ ದರ್ಜೆ ಸಹಾಯಕರು | 33 | 10 |
| 32. | ಬೆರಳಚ್ಚುಗಾರರು | 10 | 03 |
| 33. | ವಾಹನ ಚಾಲಕರು | 02 | 02 |
| 34. | ಲ್ಯಾಬ್ ಅಟೆಂಡರ್ | 05 | 05 |
| 35. | ಸ್ಟ್ಯಾಟಿಸ್ಟಿಕಲ್ ಅಸಿಸ್ಟೆಂಟ್ | 01 | 01 |
| 36. | ಸಹಾಯಕ ಕಾರ್ಯಪಾಲಕ ಅಭಿಯಂತರರು | – | 01 |
| 37. | ಸಹಾಯಕ ಅಭಿಯಂತರರು | 01 | 01 (ಸಿವಿಲ್) |
| 38. | ಸಹಾಯಕ ಅಭಿಯಂತರರು | – | 01 (ಎಲೆಕ್ಟ್ರಿಕಲ್) |
| 39. | ಕಿರಿಯ ಅಭಿಯಂತರರು | 02 | 01 |
| 40. | ಎ.ಎನ್.ಎಮ್ | 01 | 01 |
| 41. | ಪ್ರಯೋಗಾಲಯ ತಂತ್ರಜ್ಞರು | 01 | 03 |
| 42. | ಅನುಚರರು | 17 | 05 |
| 43. | ಹಾಸ್ಟೆಲ್ ಸಿಬ್ಬಂದಿ | 03 | 06 |
| 44. | ಸ್ವೀಪರ್ (ಜಾಡಮಾಲಿ) | 01 | 05 |
| | **ಒಟ್ಟು** | **120** | **78** |

**ದಿನಾಂಕ:23.11.2023 ರ ಹಣಕಾಸು ಸಮಿತಿ ಸಭೆಯ ನಿರ್ಣಯ ಈ ಕೆಳಗಿನಂತಿದೆ:**
**ವಿಶ್ವವಿದ್ಯಾನಿಲಯದಲ್ಲಿ ಸೃಜಿಸಲಾಗಿರುವ ಬೋದಕೇತರ ಹುದ್ದೆಗಳು, ಖಾಲಿ ಇರುವ ಹುದ್ದೆಗಳು ವಿಶ್ವವಿದ್ಯಾನಿಲಯದ ವಿಭಾಗವಾರು ವಿದ್ಯಾರ್ಥಿಗಳ ವಿವರಗಳೊಂದಿಗೆ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸಲು ಸೂಕ್ತವಾದ ಅಂಕಿ ಅಂಶಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು. ಹಾಗೂ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲಾಗಿದೆ.**

ಮುಂದುವರೆದು ಸರ್ಕಾರದ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಹಾಗೂ ದಕ್ಷ ಆಡಳಿತಕ್ಕೆ ಸಾಕಷ್ಟು ಮಾನವ ಸಂಪನ್ಮೂಲದ ಬೆಂಬಲದ ಅಗತ್ಯವಿದ್ದು, ತುಮಕೂರು ವಿಶ್ವವಿದ್ಯಾನಿಲಯವು ಪ್ರಸ್ತುತ ಹೊಂದಿರುವ ಘಟಕ ಕಾಲೇಜುಗಳು, ಶಿರಾ ಹಾಗೂ ತಿಪಟೂರಿನ ಸ್ನಾತಕೋತ್ತರ ಕೇಂದ್ರಗಳು, ವಿಶ್ವವಿದ್ಯಾನಿಲಯದ ಆಡಳಿತ ವಿಭಾಗಗಳು ಮತ್ತು ಬಿದರಕಟ್ಟೆಯಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ಕ್ಯಾಂಪಸ್‌ನ ಸಮರ್ಥ ಆಡಳಿತಾತ್ಮಕ ನಿರ್ವಹಣೆಗಾಗಿ ಪ್ರಸ್ತುತ ವಿಶ್ವವಿದ್ಯಾನಿಲಕ್ಕೆ ಒಟ್ಟು ಮಂಜೂರಾದ ಹುದ್ದೆಗಳು:214, ಇದುವರೆಗೂ ಭರ್ತಿಯಾಗಿರುವ ಹುದ್ದೆಗಳು–45, ಖಾಲಿ ಇರುವ ಹುದ್ದೆಗಳ ಸಂಖ್ಯೆ: 169 ಹುದ್ದೆಗಳು:214, ಇದುವರೆಗೂ ಭರ್ತಿಯಾಗಿರುವ ಹುದ್ದೆಗಳು–45, ಖಾಲಿ ಇರುವ ಹುದ್ದೆಗಳ ಸಂಖ್ಯೆ: 169 ಭೋದಕೇತರ ಹುದ್ದೆಗಳ ಸಂಖ್ಯೆಗಳನ್ನು ಕೋಷ್ಟಕದಲ್ಲಿರುವಂತೆ ಹೆಚ್ಚಿಸುವುದರ ಬಗ್ಗೆ ದಿನಾಂಕ:23.11.2023 ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಲಾಗಿದ್ದ ವಿಷಯವನ್ನು ಸೂಕ್ತ ಪ್ರಸ್ತಾವನೆಯೊಂದಿಗೆ ದಿನಾಂಕ 23.11.2023 ರಂದು ಈ ಮೇಲ್ಕಂಡ ಕೋಷ್ಟಕದಲ್ಲಿರುವ ಹುದ್ದೆಗಳನ್ನು ಹೆಚ್ಚಿಸುವ ಸಲುವಾಗಿ ಮಂಜೂರಾತಿ ಕೋರಿ ಸರ್ಕಾರಕ್ಕೆ ಪತ್ರಿಸಿಲಾಗಿದೆ.

ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಸಂಬಂಧ ಮಂಜೂರಾತಿ ಕೋರಿ ಸರ್ಕಾರಕ್ಕೆ ಪತ್ರಿಸಿಲಾದ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆ ಸ್ಥಿರೀಕರಣಕ್ಕೆ ಮಂಡಿಸಲಾಗಿದೆ.

| ವಿಷಯ ಸಖ್ಯೆ | 2023–24/ಸಾ.ವಿ.ಪ.–01: ಸಿಬ್ಬಂದಿ:03 ದಿನಾಂಕ:22.12.2023 |
|---|---|

**ವಿಷಯ: ವಿಶ್ವವಿದ್ಯಾನಿಲಯ ಮತ್ತು ಘಟಕ ಕಾಲೇಜುಗಳ ಅಧ್ಯಾಪಕರಿಗೆ ಸಿ.ಎ.ಎಸ್. ಪದೋನ್ನತಿ/ಪಿ.ಎಚ್.ಡಿ. ಮತ್ತು ಎಂ.ಫಿಲ್ ಪಡೆದ ದಿನಾಂಕಗಳಿಂದ ಅನ್ವಯವಾಗುವಂತೆ (ಅರ್ಹತಾ ದಿನಾಂಕ) ಆರ್ಥಿಕ ಸೌಲಭ್ಯಗಳನ್ನು ಹಾಗೂ ಸಿ.ಎ.ಎಸ್. ಪದೋನ್ನತಿಯಲ್ಲಿ ಕನಿಷ್ಟ ಸೇವಾವಧಿ ರಿಯಾಯಿತಿ / ಪಿ.ಎಚ್.ಡಿ. ಮತ್ತು ಎಂ.ಫಿಲ್. ಪದವಿಗಳಿಗೆ ಸಂಬಂಧಿಸಿದ ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ ಎರಡನ್ನೂ ಮಂಜೂರು ಮಾಡುವ ಕುರಿತು.**

**ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ:ಇಡಿ 08 ಯುಆರ್‌ಇ 2023 ದಿನಾಂಕ:18.05.2023**

*****

ಯುಜಿಸಿ ನಿಯಮಾವಳಿಗಳ ಪ್ರಕಾರ ಸಿ.ಎ.ಎಸ್ ಪದೋನ್ನತಿ ಪಡೆದಿರುವ ಹಾಗೂ ಪಿ.ಎಚ್.ಡಿ/ಎಂ.ಫಿಲ್ ಪದವಿಗಳನ್ನು ಪಡೆದಿರುವ ಸಿಬ್ಬಂದಿಗಳಿಗೆ ಯುಜಿಸಿ ನಿಯಮಾವಳಿಗಳನ್ವಯ ಕ್ರಮವಾಗಿ 3 ಮತ್ತು 1 Non-compounded Increment ಗಳನ್ನು ಸಿಂಡಿಕೇಟ್ ಸಭಾ ನಿರ್ಣಯದಂತೆ ಅರ್ಹತಾ ದಿನಾಂಕದಿಂದ ಕಾಲ್ಪನಿಕವಾಗಿ ನಿಗದಿಪಡಿಸಿ, ಸಿಂಡಿಕೇಟ್ ಸಭೆ ನಡೆದ ದಿನಾಂಕಗಳಿಂದ ಆರ್ಥಿಕ ಮಂಜೂರಾತಿ ನೀಡಲಾಗಿರುತ್ತದೆ. ಪ್ರಸ್ತುತ ಅಂತಹ ಬೋಧಕ ಸಿಬ್ಬಂದಿಗಳ ಅರ್ಹತಾ ದಿನಾಂಕದಿಂದಲೇ ಅನ್ವಯವಾಗುವಂತೆ ಆರ್ಥಿಕ ಸೌಲಭ್ಯವನ್ನು ನೀಡಿ, ಹಿಂಬಾಕಿ ಮೊತ್ತವನ್ನು ನೀಡಲು ಕೋರಿರುತ್ತಾರೆ, ಈ ಸಂಬಂಧ ಹಲವು ಆದೇಶಗಳ ಮೂಲಕ ವಿಶ್ವವಿದ್ಯಾನಿಲಯ / ಘಟಕ ಕಾಲೇಜುಗಳ ಅಧ್ಯಾಪಕರುಗಳ ಪದೋನ್ನತಿ ಮತ್ತು ಪದೋನ್ನತಿ ದಿನಾಂಕಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ ಈಗಾಗಲೇ ಕೆಲವು ಅಧ್ಯಾಪಕರುಗಳಿಗೆ ಪದೋನ್ನತಿ ದಿನಾಂಕಗಳನ್ನು ಪರಿಷ್ಕರಿಸಿ ವೇತನ ನಿಗದಿಗೊಳಿಸಿ ಪಾವತಿಸಲಾಗಿದ್ದು, ಕೆಲವು ಅಧ್ಯಾಪಕರುಗಳಿಗೆ ಪದೋನ್ನತಿ ದಿನಾಂಕಗಳನ್ನು ಪರಿಷ್ಕರಿಸದಿರುವುದು ಕಂಡು ಬಂದಿರುತ್ತದೆ.

ಮುಂದುವರೆದು, ನಿಗದಿತ ಸಮಯದಲ್ಲಿ ಅಧ್ಯಾಪಕರುಗಳಿಗೆ ಮಂಜೂರು ಮಾಡಬಹುದಾಗಿದ್ದ ಸೌಲಭ್ಯಗಳನ್ನು ಮಂಜೂರು ಮಾಡದೇ ಇರುವುದಕ್ಕೆ ಸಿಬ್ಬಂದಿಗಳು, ನಿಗದಿತ ಸಮಯದಲ್ಲಿ ದಾಖಲಾತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸದೆ ಇರುವುದು, ಇದರಿಂದ ಆಡಳಿತಾತ್ಮಕ & ತಾಂತ್ರಿಕ ಕಾರಣಗಳಾಗಿರುತ್ತವೆ. ಇಂತಹ ಸಂಧರ್ಭದಲ್ಲಿ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಆಡಳಿತಾತ್ಮಕ ನಿರ್ಧಾರದೊಂದಿಗೆ ಮುಂದುವರೆಯುವುದು ನೀತಿಯಾಗಿರುತ್ತದೆ ಹಾಗೂ ಅಧ್ಯಾಪಕರಿಗೆ ಕಾಲಕಾಲಕ್ಕೆ ಸಿ.ಎ.ಎಸ್ ಪದೋನ್ನತಿ ನೀಡುತ್ತಾ ಬಂದಿದ್ದರೆ ತಾಂತ್ರಿಕ ಸಮಸ್ಯೆಗಳು ಉದ್ಭವಿಸುತ್ತಿರಲಿಲ್ಲವೆಂಬ ಅಂಶವನ್ನು ಪರಿಗಣಿಸಿ ಸರ್ಕಾರಿ ಲೆಕ್ಕಪರಿಶೋಧಕರ ಮತ್ತು ಸರ್ಕಾರದ ಆಕ್ಷೇಪಣೆಗಳಿಗೊಳಪಟ್ಟು ಫಲಾನುಭವಿಗಳೆ ಅಂತಿಮ ಹೊಣೆಗಾರರಾಗಿರುತ್ತಾರೆಂದು ಮುಚ್ಚಳಿಕೆಯನ್ನು ಛಾಪಕಾಗದ (ನೋಟರಿ)ದೊಂದಿಗೆ ಫಲಾನುಭವಿಗಳಿಂದ ಪಡೆದು ಹಿಂಬಾಕಿ ಮಂಜೂರು ಮಾಡಲು ಅಂದಾಜು ವೆಚ್ಚ ರೂ. 5,00,00,000.00 (ರೂ. ಐದು ಕೋಟಿಗಳು ಮಾತ್ರ) ಗಳ ಮೊತ್ತವನ್ನು **ಸರ್ಕಾರದ ಸುತ್ತೋಲೆ ಸಂಖ್ಯೆ" ಅಇ 04 ಟಿಎಫ್‌ಪಿ 2023, ಬೆಂಗಳೂರು, ದಿನಾಂಕ:08–08–2023ರ ಪ್ರಕಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುದಾನ ಸ್ವಿಕೃತಗೊಂಡ ನಂತರ ಫಲಾನುಭವಿಗಳಿಗೆ ಪಾವತಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕಾರ್ಯಸೂಚಿಯಲ್ಲಿ ಪ್ರಸ್ತಾಪಿಸಿರುವ ಅರ್ಹ ಬೋಧಕರ ಹಿಂಬಾಕಿ ಪಾವತಿಸುವ ಕುರಿತು ಸರ್ಕಾರಕ್ಕೆ ರೂ. 5,00,00,000.00 (ರೂ. ಐದು ಕೋಟಿಗಳು ಮಾತ್ರ) ಗಳ ಅಂದಾಜು ಮೊತ್ತದ ಪ್ರಸ್ತಾವನೆ ಸಲ್ಲಿಸಲು ಹಾಗೂ ಅನುದಾನ ಸ್ವೀಕೃತಗೊಂಡ ನಂತರ ನಿಯಮಾನುಸಾರ ಪಾವತಿಸುವ** ಕುರಿತಂತೆ ದಿನಾಂಕ: 23.11.2023 ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಲಾಗಿದ್ದು, ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ.

**ನಿರ್ಣಯ:** ವಿಶ್ವವಿದ್ಯಾನಿಲಯ ಮತ್ತು ಘಟಕ ಕಾಲೇಜುಗಳ ಅಧ್ಯಾಪಕರಿಗೆ ಸಿ.ಎ.ಎಸ್. ಪದೋನ್ನತಿ / ಪಿ.ಎಚ್.ಡಿ. ಮತ್ತು ಎಂ.ಫಿಲ್ ಪಡೆದ ದಿನಾಂಕಗಳಿಂದ ಅನ್ವಯವಾಗುವಂತೆ (ಅರ್ಹತಾ ದಿನಾಂಕ) ಆರ್ಥಿಕ ಸೌಲಭ್ಯಗಳನ್ನು ಹಾಗೂ ಸಿ.ಎ.ಎಸ್. ಪದೋನ್ನತಿಯಲ್ಲಿ ಕನಿಷ್ಟ ಸೇವಾವಧಿ ರಿಯಾಯಿತಿ/ಪಿ.ಎಚ್.ಡಿ. ಮತ್ತು ಎಂ.ಫಿಲ್. ಪದವಿಗಳಿಗೆ ಸಂಬಂಧಿಸಿದ ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ ಎರಡನ್ನು ಮಂಜೂರು ಮಾಡಲು ಸರ್ಕಾರದಿಂದ ಯಾವುದೇ ಅನುದಾನವನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲವೆಂದು ಮಾನ್ಯ ಸದಸ್ಯರು ಹಾಗೂ ಜಂಟಿ ಕಾರ್ಯದರ್ಶಿಗಳು ಹಣಕಾಸು ಇಲಾಖೆ ಇವರು ತಿಳಿಸಿದರು. ಮಾನ್ಯ ಉಪಕುಲಪತಿಗಳು ಮಾತನಾಡುತ್ತಾ, ಸದರಿ ಆರ್ಥಿಕ ಸೌಲಭ್ಯವನ್ನು ನೀಡುವುದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಉಂಟಾಗದಂತೆ ವಿಶ್ವವಿದ್ಯಾನಿಲಯದ ಆಂತರಿಕ ಸೌಲಭ್ಯದಿಂದ ಭರಿಸುವಂತೆ ಚರ್ಚಿಸಲಾಯಿತು ಹಾಗೂ ಈ ಸಂಬಂಧ ವಿದ್ಯಾವಿಷಯಕ ಪರಿಷತ್ ಸಭೆ ಹಾಗೂ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡುವಂತೆ ನಿರ್ಣಯಿಸಲಾಯಿತು.

ಉಲ್ಲೇಖಿತ ಸರ್ಕಾರದ ಸುತ್ತೋಲೆಯನ್ನು ಮತ್ತು ದಿನಾಂಕ: 23.11.2023 ರಂದು ನಡೆದ ಹಣಕಾಸು ಸಮಿತಿ ಸಭೆಯ ನಿರ್ಣಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.